# ೪ನೇ ಭಾಗ.

## ಒಕ್ಕಲತನ.

### ಸನ್ ೧೮೮೧ನೇ ವರ್ಷ ಖಾನೆಸುಮಾರಿಯಂತೆ ವೊಕ್ಕಲತನ ಮಾಡುವ ಜನರ ವಿವರ.

| ಜಿಲ್ಲೆಗಳು. | ಗಂಡು. | | | ಹೆಣ್ಣು. | | | ಒಟ್ಟು. | ಶೇಕಡಾ. |
|---|---|---|---|---|---|---|---|---|
| | ೧೫ ವರ್ಷ ದೊಳಗಿನವರು | ೧೫ ವರ್ಷ ಮಿಾರಿದವರು | ಒಟ್ಟು | ೧೫ ವರ್ಷ ದೊಳಗಿನವರು | ೧೫ ವರ್ಷ ಮಿಾರಿದವರು | ಒಟ್ಟು | | |
| ವಿಜಾಪುರ ...... | ೯೦೦೨೭ | ೧೫೧೩೧೨ | ೨೪೧೩೩೯ | ೮೫೬೩೬ | ೧೫೮೧೮೬ | ೨೪೩೮೨೫ | ೪೮೫೧೬೪ | ೭೫·೯೮ |
| ಬೆಳಗಾವಿ....... | ೧೨೧೧೩೩ | ೧೮೬೭೭೬ | ೩೦೭೯೦೯ | ೧೧೩೨೪೦ | ೧೯೧೧೫೮ | ೩೦೪೩೯೮ | ೬೧೨೩೦೭ | ೭೦·೦೦ |
| ಧಾರವಾಡ ...... | ೧೧೭೨೨೭ | ೧೮೭೮೫೦ | ೩೦೫೦೭೭ | ೧೧೧೯೭ | ೧೯೨೦೮೮ | ೩೦೪೦೬೭ | ೬೦೯೧೪೪ | ೬೮·೦೦ |
| ಕಾನಡಾ ....... | ೪೯೨೭೯ | ೮೮೬೪೪ | ೧೩೭೯೨೩ | ೪೫೪೮೦ | ೭೭೪೯೪ | ೧೨೨೯೭೪ | ೨೬೦೮೯೭ | ೬೧·೦೦ |
| | ೩೭೭೬೬೬ | ೬೧೪೫೮೨ | ೯೯೨೨೪೮ | ೩೫೬೩೩೫ | ೬೧೮೯೨೯ | ೯೭೫೨೬೪ | ೧೯೬೭೫೧೨ | ೬೮·೭೫ |

**ಒಕ್ಕಲತನದವರು.**

ವೊಕ್ಕಲತನದ ಸಂಬಂಧದಲ್ಲಿ ವಿಜಾಪುರ, ಬೆಳಗಾವಿ, ಧಾರವಾಡ, ಈ ಮೂರು ಜಿಲ್ಲೆಗಳಿಗೂ ಕಾನಡಾ ಜಿಲ್ಲೆಗೂ ಸ್ವಲ್ಪ ಅಭ್ಯಂತರವಿರುತ್ತದೆ. ಮೊದಲಿನ ಮೂರು ಜಿಲ್ಲೆಗಳಲ್ಲಿ ಲಿಂಗವಂತರೇ ಮುಖ್ಯ ವೊಕ್ಕಲಿಗರೆನಿಸಿ ಕೊಳ್ಳುತ್ತಾರೆ. ಅವರ ಕೆಳಗೆ ವಿಜಾಪುರ ಜಿಲ್ಲೆಯಲ್ಲಿ ಕುರುಬರು, ರಡ್ಡೇರು, ಮುಸಲ್ಮಾನರು, ಹೊಲಿಯರು, ಮಾದಿಗರು, ಬ್ರಾಹ್ಮಣರು, ಆರೇರು, ಲಮಾಣಿಗಳು, ವಡ್ಡರು; ಬೆಳಗಾವೀ ಜಿಲ್ಲೆಯಲ್ಲಿ, ಆರೇರು, ಜೈನರು, ಮುಸಲ್ಮಾನರು, ಕುರುಬರು, ಹೊಲಿಯರು, ಬೇಡರು, ಬ್ರಾಹ್ಮಣರು; ಧಾರವಾಡ ಜಿಲ್ಲೆಯಲ್ಲಿ ಆರೇರು, ಮುಸಲ್ಮಾನರು, ಬ್ರಾಹ್ಮಣರು, ಕುರುಬರು, ಲಮಾಣಿಗಳು, ಹೊಲಿಯರು; ಈ ಪ್ರಕಾರ ಮೂರು ಜಿಲ್ಲೆಗಳಲ್ಲಿ ಭೂಮಿಯ ಮಾಡುವವರ ಕ್ರಮವಿರುತ್ತದೆ. ವಿಜಾಪುರ ಜಿಲ್ಲೆಯಲ್ಲಿ ಕುರುಬರಿಗೆ ಹೆಚ್ಚಾಗಿ ಗೌಡಕಿಯ ಕೆಲಸವಿರುತ್ತದೆ; ಬೆಳಗಾವಿ, ಧಾರವಾಡ ಜಿಲ್ಲೆಗಳಲ್ಲಿ ಲಿಂಗವಂತರಿಗೆ ಇರುತ್ತವೆ. ವಿಜಾಪುರ ಜಿಲ್ಲೆಯ ವೊಕ್ಕಲತನದವರ ಮನೆಗಳೆಲ್ಲ ಮಾಳಿಗೆಯ ಮನೆಗಳು; ದೈವುಳ್ಳವರು ಗಚ್ಚುಕಲ್ಲು, ಇಲ್ಲವೆ ಸುಟ್ಟ ಇಟ್ಟಂಗಿ ಇವುಗಳ ಮನೆಗಳನ್ನು ಕಟ್ಟಿಸುವರು. ಬೆಳಗಾವಿ ಧಾರವಾಡ ಜಿಲ್ಲೆಗಳಲ್ಲಿ ಬಹುತರ ಹಂಚಿನ ಮನೆಗಳೇ ಬಹಳ; ಬಡವರು ಹುಲ್ಲಿನ ಮನೆಗಳಲ್ಲಿ ವಾಸಿಸುವರು. ಯೆಲ್ಲ ಕಡೆಯಲ್ಲಿ ವೊಕ್ಕಲತನದ ಜನರು ವ್ಯವಸ್ಥಿತರೂ, ಶಾಂತರೂ, ಧಾರ್ಮಿಕರೂ, ವಾಡಿಕೆಯಾಗಿ ಮಿತದಿಂದ ವೆಚ್ಚ ಮಾಡುವವರೂ ಇರುತ್ತಾರೆ; ಬ್ರಾಹ್ಮಣರು, ಜೈನರು, ಲಿಂಗವಂತರು, ಸ್ವಚ್ಛತನದಲ್ಲಿ ಪ್ರಮುಖರೆಂದು ಹೇಳ ಬಹುದು; ಕಡಿಮೇ ಕುಲದವರಲ್ಲಿ ಹೊಲಸು ಬಹಳ. ಒಕ್ಕಲತನದ ಜನರು ಭೂಮಿಯ ಹೋರೆಯಲ್ಲದೆ ಛಕಡಿಯ ಬಾಡಿಗೆ, ಹೈನದ ಮಾರಾಟ, ನೂಲುವದು, ಹತ್ತೀ ಅರಿಯುವದು, ಕಂಬಳೀ ನೆಯ್ಯುವದು, ಉಣ್ಣೇ ಮಾರುವದು, ಕೋಳಿಗಳನ್ನು ಸಾಕಿ ಮಾರುವದು, ಮೀನ ಹಿಡಿಯುವದು, ಬೇಟೆ, ಕೂಲಿ, ಈ ಹೋರೆಗಳನ್ನು ಮಾಡುವರು. ಈ ಹೋರೆಗಳಿಂದ ಇವರಿಗೆ ಸುಮಾರು ಇವರ ವೆಚ್ಚದ ನಾಲ್ಕನೇ ಪಾಲಷ್ಟು ಆದಾಯವಾಗುತ್ತದೆ. ಬೆಳಗಾವೀ ಜಿಲ್ಲೆಯ ವೊಕ್ಕಲಿಗರಿಗೆ ವೆಂಗುರ್ಲೆಗೆ ಹೋಗ ಬರುವ ಬಾಡಿಗೆ ವೊಳಿತಾಗಿ ದೊರಿಯುತ್ತದೆ.

ಲಿಂಗವಂತರಿಗೂ ಮಹಾರಾಷ್ಟ್ರ ಶೀಮೆಯ ಕುಣಬಿಗಳಿಗೂ ಬಹಳ ಅಭ್ಯಂತರವಿರುತ್ತದೆ. ಲಿಂಗವಂತ ವೊಕ್ಕಲಿಗರಲ್ಲಿ ಉತ್ತರ ದೇಶದವರ ರಕ್ತ ಸಂಬಂಧವು ಬಹು ಕಡಿಮೆ; ಸ್ವರೂಪದಲ್ಲಿಯೂ ಆಳು ದೊಡ್ಡದು, ಮೈಬಣ್ಣ ಹೆಚ್ಚು ಕಪ್ಪು, ಮೈಕಟ್ಟು ಹೆಚ್ಚು ಕಸುವುಳ್ಳದ್ದು. ಇವರು ಕುಣಬಿಗಳಿಗಿಂತ ಹೆಚ್ಚು ಶ್ರಮ ಮಾಡುವರು, ವ್ಯಾಪಾರದ ಹರಿಯನ್ನು ಬಲ್ಲವರು, ಒಳ್ಳೇ ಮನಸಿನವರು, ಬುದ್ಧಿವಂತರು, ಧೂರ್ತರು, ಸಾಹಸಿಗಳು.

ಇಂಗ್ಲಿಷ ಸರಕಾರದ ಪೂರ್ವದಲ್ಲಿ, ಅಂದರೆ ಮಹಾರಾಷ್ಟ್ರರ ಅಮಲಿನಲ್ಲಿ ಈ ಶೀಮೆಯ ವೊಕ್ಕಲಿಗರ ಸ್ಥಿತಿಯು ಬಹಳ ಕೆಟ್ಟಿತ್ತು; ಮಹಾರಾಷ್ಟ್ರರ ಕೊಲೆ ಸುಲಿಗೆಗಳು ಮೇಲೆ ಮೇಲೆ ಬರುತ್ತಿದ್ದವು. ಇಂಗ್ಲಿಷ ಸರಕಾರದ ಅಮಲು ಬಂದ ಬಳಿಕ ಒಕ್ಕಲಿಗರ

ಸ್ಥಿತಿಯು ಸುಧಾರಿಸುತ್ತ ಬಂತು. ಸನ್ ೧೮೪೦ರಿಂದ ೧೮೫೦ರ ವರೆಗೆ ಭೂಮಿಯು ಅಳೆಯಲ್ಪಟ್ಟು ತೆರಿಗೆಯು ಗೊತ್ತಾದ್ದರಿಂದ ವೊಕ್ಕಲಿಗರಿಗೆ ಧೈವುಳ್ಳತನವು ಬರ ಹತ್ತಿತು. ಸನ್ ೧೮೬೦ರಿಂದ ೧೮೭೧ರ ವರೆಗೆ ಅರಳೆಯ ಬೆಲೆಯು ಯೇರಿದ್ದರಿಂದ ವೊಕ್ಕಲಿಗರಲ್ಲಿ ಬಡತನವೇ ಉಳಿಯಲಿಲ್ಲ; ಹತ್ತಿ ಬೆಳೆಯುವ ಪ್ರದೇಶಗಳಲ್ಲಂತು ಅವರ ಸಂಪತ್ತಿಯು ಅಳತಿಗೆಟ್ಟಿತು. ಆ ಕಾಲಕ್ಕೆ ಜಾತ್ರೆಗಳಲ್ಲಿ ಬೆಳ್ಳಿಯ ಕಟ್ಟು ಹಾಕಿದಂಥ ಛಕಡೀ ಗಾಲಿಗಳ ಗಡ್ಡೆಗಳನ್ನೂ ಬೆಳ್ಳಿಯ ಸರಗಳನ್ನು ಹಾಕಿದಂಥ ಯೆತ್ತುಗಳನ್ನೂ ಕಾಣುವದು ಅಪರೂಪದ ಸಂಗತಿಯಾಗಿದ್ದಿಲ್ಲ. ವೊಕ್ಕಲಿಗನ ಮನೆಯಲ್ಲಿ ಬಂಗಾರದ ಹೊಗೆ ಹಾಯುತ್ತಿತ್ತು. ಈ ಹತ್ತು ವರ್ಷಗಳಲ್ಲಿ ವೊಂದೇ ಧಾರವಾಡ ಜಿಲ್ಲೆಯಲ್ಲಿ ೮೧೫೦೦೦೦೦ ರೂಪಾಯಿಯ ಸಂಪತ್ತಿಯು ಪರದೇಶದಿಂದ ಬಂತೆಂದು ವೊಬ್ಬ ಯುರೋಪದ ವ್ಯಾಪಾರಿಯು ಲೆಕ್ಕ ಮಾಡಿದ್ದಾನೆ. ಆದರೆ ಈ ಸಂಪತ್ತಿಯು ಬಹಳ ದಿವಸ ನಿಲ್ಲಲಿಲ್ಲ. ಬಹು ಜನರು ವ್ಯಾಪಾರದ ಮರ್ಮವನ್ನು ಅರಿಯದೆ ಅರಳೆಯ ವ್ಯಾಪಾರಕ್ಕೆ ಬಿದ್ದು ಹಣ ಕಳಕೊಂಡರು; ಭೂಮಿಯ ತೆರಿಗೆ ಯೇರಿತು; ಬರಗಾಲವು ಮೇಲೆ ಮೇಲೆ ಬರಹತ್ತಿತು. ಸನ್ ೧೮೭೬—೭೭ನೇ ವರ್ಷದ ಬರದಲ್ಲಿ ಬಹು ಜನ ವೊಕ್ಕಲಿಗರು ನಿರ್ಮೂಲರಾದರೆಂದು ಹೇಳ ಬಹುದು. ಈಚೆಯಲ್ಲಿ ಇವರ ಸ್ಥಿತಿಯು ಸಾವಕಾಶವಾಗಿ ಸುಧಾರಿಸುತ್ತ ನಡೆದದೆ. ಈ ಬರಗಾಲದ ಅನುಭವದಿಂದ ವೊಕ್ಕಲಿಗರಲ್ಲಿ ಯೆಚ್ಚರ ಹುಟ್ಟಿ ಇವರು ತಮ್ಮ ಹಣವನ್ನು ವಿವೇಕದಿಂದ ವೆಚ್ಚ ಮಾಡ ಹತ್ತಿದ್ದಾರೆ. ಆದರೂ ಲಗ್ನ ಮುಂತಾದ ಕಾರ್ಯಗಳು, ಬೆಳೆಗೇಡು, ದಿವಾಣೀ ವ್ಯಾಜ್ಯ, ಮುಂತಾದ ಕಾರಣಗಳಿಂದ ಇವರು ಮೊದಲು ಸಂಗ್ರಹಿಸಿದ ಹಣವನ್ನು ಕಳಕೊಳ್ಳುತ್ತಾರೆ; ಆ ಮೇಲೆ ಸಂಗ್ರಹದ ಕಾಳು ಮಾರುವರು; ತರುವಾಯ ಯೆತ್ತುಗಳನ್ನು ಮಾರುವರು; ಕಡೆಯಲ್ಲಿ ಮನೆಯಲ್ಲಿ ಇದ್ದ ಸಣ್ಣ ಪುಟ್ಟ ಆಭರಣಗಳನ್ನು ವೊತ್ತೆ ಇಡುವರು. ಇಷ್ಟರಿಂದಲೂ ದುಡ್ಡಿನ ಬಚು ತೀರದಿದ್ದರೆ ಭೂಮಿಯನ್ನು ವೊತ್ತಿ ಹಾಕುವರು. ವೊಮ್ಮೆ ಸಾಲ ಬೆನ್ನು ಹತ್ತಿತೆಂದರೆ ಅದರ ಬಡ್ಡಿ ಶೇಕಡಾ ವರ್ಷಕ್ಕೆ ೧೮, ೨೪, ೩೦, ೩೬ರಂತೆ ಸಹ ಇವರ ಯದೆಯ ಮೇಲೆ ಕೂಡ್ರ ಹತ್ತುತ್ತದೆ. ಸಾವುಕಾರನು ವೊಕ್ಕಲಿಗನ ಹೊಲವನ್ನು ಮೊದಲು ತೋರವತ್ತೀ ಬರಿಸಿ ಕೊಂಡು ಕೆಲವು ದಿವಸ ಹೊಲವನ್ನು ವೊಕ್ಕಲಿಗನ ಕೈಯಲ್ಲಿಯೇ ಇಡುತ್ತಾನೆ. ಆದರೆ ಕಡೆಯಲ್ಲಿ ಬಡ್ಡಿಯನ್ನು ಸಾಧಿಸಿದಷ್ಟು ಬೆಳಿಸಿ, ಕೋರ್ಟಿಗೆ ಹೋಗಿ ಹೊಲವನ್ನು ಕಸುಕೊಂಡು ಬಿಡುತ್ತಾನೆ. ಈ ಬಗೆಯಾಗಿ ಮನೆಯಲ್ಲಿ ನಾಲ್ಕೆಂಟು ಯೆತ್ತು ಮಾಡಿ ಕೊಂಡು ಸುಖದಿಂದ ಇರುವಂಥ ವೊಕ್ಕಲಿಗನು ವೊಮ್ಮೆ ದುಡ್ಡಿನ ಪೇಚಿನೊಳಗೆ ಬಿದ್ದನೆಂದರೆ ಹತ್ತೆಂಟು ವರ್ಷದೊಳಗೆ ಬಳಿಯಲ್ಲಿ ಇದ್ದದ್ದನ್ನೆಲ್ಲ ಕಳಕೊಂಡು ಕೂಲಿಕಾರನಾಗುತ್ತಾನೆ. ಸದ್ಯಕ್ಕೆ ವೊಕ್ಕಲತನದಿಂದ ಜೀವಿಸುವವರಲ್ಲಿ ಸುಮಾರು ನಾಲ್ಕನೇ ಪಾಲಷ್ಟು ಜನರಿಗೆ ಮಾತ್ರ ಸಾಲವಿಲ್ಲೆಂದು ಹೇಳ ಬಹುದು. ಬಹು ಜನರ ಮನೆಯಲ್ಲಿ ಇಡೀ ವರ್ಷಕ್ಕೆ ಸಾಲುವಷ್ಟು ಕಾಳು ಇರುವದಿಲ್ಲ. ನಾಲ್ಕಾರು ತಿಂಗಳಲ್ಲಿ ಮನೆಯ ಕಾಳುಗಳು ತೀರಿದವೆಂದರೆ ಸಾಲಕ್ಕೆ ಆರಂಭವಾಗುತ್ತದೆ. ಆದರೆ ಧಾರವಾಡ ಜಿಲ್ಲೆಯ ವೊಕ್ಕಲಿಗರ ಸ್ಥಿತಿಯು ಇದಕ್ಕೂ ಸ್ವಲ್ಪ

ಮೇಲಾದದ್ದಿರುತ್ತದೆಂದು ಹೇಳ ಬಹುದು. ಈ ಜಿಲ್ಲೆಯಲ್ಲಿ ಹತ್ತಿಯ ಭೂಮಿ ಬಹಳ ಇರುವ ಕಾರಣ ತೀರ ಕರಿಸಾಲು ಬಹುತರ ಬೀಳುವದಿಲ್ಲ. ಇದಲ್ಲದೆ ಈ ಜಿಲ್ಲೆಯ ವೊಕ್ಕಲಿಗರು ತಮ್ಮ ಮಾಲು ತಾವೇ ಕುಮಟಾ, ಕಾರವಾಡ, ಹುಬ್ಬಳ್ಳಿ, ಧಾರವಾಡ, ಮುಂತಾದ ಪೇಟೆಗಳಿಗೆ ಹೋಗಿ ಮಾರಾಟ ಮಾಡಿ ಕೊಂಡು ಬರುವರು. ಗೋಕಾವಿ ಮುಂತಾದ ಕೆಂಪು ಭೂಮಿಯ ಪ್ರದೇಶಗಳಲ್ಲಿ ವೊಕ್ಕಲಿಗರು ನಿಕೃಷ್ಟ ಸ್ಥಿತಿಯಲ್ಲಿ ಇದ್ದಾರೆ.

ಕಾನಡಾ ಜಿಲ್ಲೆಯಲ್ಲಿ ಬಹುತರ ಯಾವತ್ತು ಭೂಮಿಯ ವೊಡೆಯರು ಬ್ರಾಹ್ಮಣರಿದ್ದಾರೆ. ಹೊನ್ನಾವರ ತಾಲೂಕಿನಲ್ಲಿ ನವಾಯತರ ಕೈಯಲ್ಲಿಯೂ ಘಟ್ಟದ ಮೇಲಿನ ತಾಲೂಕುಗಳಲ್ಲಿ ಕೆಲಕೆಲವು ಕಡೆಯಲ್ಲಿ ಲಿಂಗವಂತರ ಕೈಯಲ್ಲಿಯೂ ಭೂಮಿಯ ವೊಡೆತನವಿರುತ್ತದೆ. ಆದರೆ ಬ್ರಾಹ್ಮಣರಲ್ಲಿ ಹೈಗರೂ ಹಬ್ಬುಗಳೆಂಬವರೂ ಮಾತ್ರ ತಮ್ಮ ಭೂಮಿಗಳನ್ನು ತಾವೇ ಮಾಡುತ್ತಾರೆ. ಸಾರಸ್ವತರು, ಕೊಂಕಣಿಗರು, ನವಾಯತರು, ಇವರೆಲ್ಲರು ತಮ್ಮ ಭೂಮಿಗಳನ್ನು ಬೇರೆ ರೈತರಿಗೆ ಸಾಗಿಸುವರು. ಈ ರೈತರಲ್ಲಿ ಯೆರಡು ವಿಧವು. ವಂಶ ಪರಂಪರೆಯಾಗಿ ಭೂಮಿಯು ಮಾಡುವ ಹಕ್ಕು ಪಡಿದವರಿಗೆ ಮೂಲಗೇಣೀಗಾರರೆನ್ನುವರು; ನಾಲ್ಕು ಮೂರು ವರ್ಷದ ಪೂರ್ತೆಗೆ ಭೂಮಿಯನ್ನು ಮಾಡುವವರಿಗೆ ಚಾಲಗೇಣೀಗಾರರನ್ನುವರು. ಈ ಬಗೆಯಾಗಿ ಭೂಮಿಯನ್ನು ಮೂಲಗೇಣಿಯಿಂದಾಗಲಿ ಚಾಲಗೇಣಿಯಿಂದಾಗಲಿ ಮಾಡುವ ಕುಲಗಳು ಹಳಿಪೈಕರು, ಕೊಮಾರಪೈಕರು, ಭಂಡಾರಿಗಳು, ಪಂಚಮಸಾಲಿಯವರು, ಕೊಂಕಣೀ ಕುಣಬಿಗಳು, ನಾಡೋರರು, ಆರೇರು, ಮುಸಲ್ಮಾನರು, ಖ್ರಿಸ್ತಿಗಳು. ಇವರಲ್ಲಿ ಸ್ವಲ್ಪ ಜನರು ಭೂಮಿಯ ವೊಡೆಯರು ಸಹ ಇರುತ್ತಾರೆ; ಬಹು ಜನರು ಗೇಣಿಯಿಂದ ಭೂಮಿಯನ್ನು ಮಾಡುವರು; ಉಳಿದವರು ಭೂಮಿಯಲ್ಲಿ ಕೂಲಿಯ ಹೋರೆ ಮಾಡುವರು. ಘಟ್ಟದ ಕೆಳಗೆ ದೇವಳಿಗಳಿಗೂ ಘಟ್ಟದ ಮೇಲೆ ಕಬ್ಬೇರಿಗೂ ಅಲ್ಪ ಸ್ವಲ್ಪ ಭೂಮಿಯುಂಟು. ಪಡತಿಗಳು ಗೇಣಿಯಿಂದ ಭೂಮಿಯ ಮಾಡುವರು; ಕೂಲಿಯಿಂದ ಭೂಮಿಯ ಹೋರೆ ಮಾಡುವರು. ಕರೇ ವೊಕ್ಕಲಿಗರು, ಕೊಟ ವೊಕ್ಕಲಿಗರು, ಗಾವ ವೊಕ್ಕಲಿಗರು, ಹಾಲ್ವಕ್ಕೀ ವೊಕ್ಕಲಿಗರು, ಇವರೆಲ್ಲ ಚಾಲಗೇಣಿಯಿಂದ ಭೂಮಿಯ ಮಾಡುತ್ತಾರೆ, ಇಲ್ಲವೆ ಕೂಲಿಗೆ ಹೋಗುತ್ತಾರೆ.

ಹೈಗರು ಮೇಲಾದ ವೊಕ್ಕಲಿಗರೆನಿಸಿ ಕೊಳ್ಳುತ್ತಾರೆ. ಇವರು ಅಡಿಕೆ ಮುಂತಾದವುಗಳ ತೋಟಗಳನ್ನು ಮಾಡುವರು; ತಮ್ಮ ತೋಟಗಳಲ್ಲಿಯೇ ಮನೆ ಮಾಡಿ ಕೊಂಡು ನಿಂತು ಕೂಲಿಯವರನ್ನು ಕರೆಕೊಂಡು ಹಗಲು ರಾತ್ರಿ ಶ್ರಮ ಮಾಡುವರು. ಹೈಗರಿಂದಲೇ ಕಾನಡಾ ಜಿಲ್ಲೆಯ ಅಡಿಕೆ, ಯಾಲಕ್ಕಿ, ಮೆಣಸು, ಮುಂತಾದವುಗಳ ತೋಟಗಳು ಹೆಸರಾಗಿವೆ. ಇವರು ಶಾಂತರೂ ಮಿತವ್ಯಯಿಗಳೂ ಆಗಿ, ವೊಕ್ಕಲತನದ ಹೊರ್ತು ಬೇರೆ ಹೋರೆಯನ್ನು ಕೈಕೊಳ್ಳಲಿಕ್ಕೆ ಅಪೇಕ್ಷಿಸುವದಿಲ್ಲ. ಹೈಗರ ತೋಟಗಳು ಶಿರಸಿ, ಸಿದ್ದಾಪುರ ತಾಲೂಕುಗಳಲ್ಲಿ ವಿಶೇಷವಾಗಿ ಇರುತ್ತವೆ. ಮುಂಡಗೋಡ ಮಹಾಲು, ಸುಪೆ ತಾಲೂಕು, ಇವು ಧಾರವಾಡ ಜಿಲ್ಲೆಗೆ ಹೊಂದಿರುವ ಕಾರಣ ಇವುಗಳಲ್ಲಿಯ ವೊಕ್ಕಲತನವು ಧಾರವಾಡ ಜಿಲ್ಲೆಯ ವೊಕ್ಕಲತನವನ್ನೇ ಹೋಲುತ್ತದೆ. ಈ ಪ್ರದೇಶಗಳ

ಲ್ಲಿಯ ಭೂಮಿಯನ್ನು ಲಿಂಗವಂತರು, ಮುಸಲ್ಮಾನರು, ದೇಶಸ್ಥರು, ಶೇಣವಿಗಳು, ಆರೇರು ಮಾಡುತ್ತಾರೆ.

**ಭೂ ಮಿ.**

ಮುಂಬಯಿ ಕರ್ನಾಟಕದ ಭೂಮಿಯಲ್ಲಿ ನಾಲ್ಕು ಮುಖ್ಯ ವರ್ಗಗಳನ್ನು ಮಾಡಬಹುದು; ಕೊಂಕಣ, ಮಲ್ಲಾಡ, ಮಲ್ಲಾಡ ಶರಗು, ಬೈಲು ಶೀಮೆ. ಕೊಂಕಣದಲ್ಲಿ, ಅಂದರೆ ಕಾನಡಾ ಜಿಲ್ಲೆಯ ಘಟ್ಟದ ಕೆಳಗಿನ ಪ್ರದೇಶದಲ್ಲಿ, ಸಮುದ್ರತೀರದ ಮಳಲು ಭೂಮಿಯಲ್ಲಿ ತೆಂಗು, ಅಡಿಕೆ, ಅಕ್ಕಿಗಳು ಮಾತ್ರ ಬೆಳೆಯುತ್ತವೆ. ಮಳಲು ಭೂಮಿಯ ಮೇಲ್ಗಡೆಯಲ್ಲಿ ಗುಡ್ಡಗಳ ನಡುವಿನ ಕಂದರಗಳಲ್ಲಿ ಬೆಟ್ಟದ ಭೂಮಿ ಯೆಂಬ ಬಿರಿಸು ನೆಲವಿರುತ್ತದೆ. ಇದನ್ನು ಆಗಾಗ್ಗೆ ಹರಗಿ ಮಿದು ಮಾಡದಿದ್ದರೆ ಇದು ಬಹಳ ಬಿರಿಸಾಗಿ ಬೆಳೆಯನ್ನು ಕೆಡಿಸುತ್ತದೆ. ಈ ಕಂದರಗಳ ಮೇಲಿನ ತುದಿಯಲ್ಲಿ ಅಭ್ರಕದ ಕಣಗಳಿಂದ ಮಿಂಚುವಂಥ ಕಾಗದಳಿ ಯೆಂಬ ಕೆಂಪು ಭೂಮಿಯು ಪೊಳಿತಾಗಿ ಬೆಳೆಯುಳ್ಳದ್ದಿರುತ್ತದೆ. ಇದೇ ಮೇರೆಗೆ ಕಂದರಗಳ ಮುಖದ ಹತ್ತರ ಗಜನಿ ಯೆಂಬ ತೇಪಿನ ಕರೆಭೂಮಿಯಲ್ಲಿಯೂ, ಅದರ ಕೆಳಬದಿಯಲ್ಲಿ ಬೈಲೆಂಬ ಮೇಲಾದ ಕರೆಭೂಮಿಯಲ್ಲಿಯೂ ತೋಟಗಳಲ್ಲಿ ನಾನಾ ಪ್ರಕಾರದ ಫಲವೃಕ್ಷ ಮುಂತಾದ ಪೈರುಗಳು ಬರುತ್ತವೆ.

ಮಲ್ಲಾಡದ ಪ್ರದೇಶವು ಕಾನಡಾ ಜಿಲ್ಲೆಯಲ್ಲಿ ವಿಶೇಷವಿರುತ್ತದೆ; ಅದರಲ್ಲಿ ಹೆಚ್ಚಾಗಿ ಅಡವಿಯೇ ಹಬ್ಬಿರುವದು. ಆದರೂ ಹಲ್ಯಾಳ ಯಲ್ಲಾಪುರ, ಇವೆರಡು ಆ ಜಿಲ್ಲೆಯಲ್ಲಿ ಮಲ್ಲಾಡದ ತಾಲೂಕುಗಳಿವೆ. ಧಾರವಾಡ ಜಿಲ್ಲೆಯಲ್ಲಿ ಧಾರವಾಡ, ಕಲಘಟಗಿ, ಬೆಳಗಾವೀ ಜಿಲ್ಲೆಯಲ್ಲಿ ಬೆಳಗಾವಿ, ಖಾನಾಪುರ, ಈ ನಾಲ್ಕು ತಾಲೂಕುಗಳ ಪಶ್ಚಿಮ ಭಾಗಗಳು ಮಲ್ಲಾಡದ ಭಾಗವಾಗಿ ಇರುತ್ತವೆ. ಮಲ್ಲಾಡದಲ್ಲಿ ಗುಡ್ಡಗಳು ಬಹಳ, ಮಳೆ ಬಹಳ, ಭೂಮಿ ಮುಸಾರಿ ಅಥವಾ ಮುಸಾಲಿ, ಅಂದರೆ ಕೆಂಪು ಮಣ್ಣು. ಕೆಂಪು ಭೂಮಿಯು ನೀರು ಹಿಡಿಯುವದಿಲ್ಲ; ಆದ್ದರಿಂದ ಇದಕ್ಕೆ ಮೇಲೆ ಮೇಲೆ ಮಳೆ ಬೇಕಾಗುತ್ತದೆ. ಇದಕ್ಕೆ ಕಾನಡಾ ಜಿಲ್ಲೆಯ ಕಾಗದಳಿ ಯೆಂಬ ಹೆಸರೇ ಘಟ್ಟದ ಮೇಲೆಯೂ ನಡಿಯುತ್ತದೆ. ಈ ಜೆಣುಗಾದ ಕೆಂಪು ಮಣ್ಣಿನ ಭೂಮಿಯಲ್ಲಿ ಕಬ್ಬಿಣದ ಕಲ್ಲಿನ ಹರಳುಗಳೂ ಆಣೇ ಕಲ್ಲಿನ ಹರಳುಗಳೂ ಕೂಡಿರುತ್ತದೆ. ಹರಳುಗಳಿಲ್ಲದಂಥ ಕಾಗದಳೀ ಭೂಮಿಯು ತಕ್ಕಮಟ್ಟಿಗೆ ನೀರು ಹಿಡಿಯುವದರಿಂದ ಮೇಲಾದದ್ದೆನಿಸುತ್ತದೆ. ಸ್ಲೇಟಿನ ಜಾತಿಯ ಹರಳು ಬಹಳ ತುಂಬಿದಂಥ ನಸುಗೆಂಪು ಮಣ್ಣಿನ ಭೂಮಿಗೆ ಧಾರವಾಡ ಜಿಲ್ಲೆಯಲ್ಲಿ ಜಡ್ಡೀ ಭೂಮಿಯನ್ನುವರು. ಈ ಕೆಂಪು ಮಣ್ಣಿನ ಭೂಮಿಯನ್ನು ಬಹು ದಿವಸ ಕೈ ಹಚ್ಚದೆ ಬಿಟ್ಟರೆ, ಮೇಲಿನ ಸಡಿಲಾದ ಸೂಸು ಮಣ್ಣೆಲ್ಲ ಮಳೆಯಿಂದ ಹರಿದು ಹೋಗಿ, ಬುಡದಲ್ಲಿ ಉಳಿದ ಬಿರುಸಾದ ನೆಲವು ಕೆಂಪು ಕಲ್ಲಿನ ಹಾಗೆ ಕಾಣುವದು; ಅದರಲ್ಲಿ ಹುಲ್ಲು ಸಹ ಹುಟ್ಟುವದಿಲ್ಲ. ಆದರೆ ಮೇಲಿನ ಮಣ್ಣು ಸ್ವಲ್ಪ ಸಡಿಲು ಮಾಡಿದರೆ ಕೆಳಗೆಲ್ಲ ಮಿದು ನೆಲವೇ ಇರುತ್ತದೆ. ಅದರಲ್ಲಿ ಸುಲಭವಾಗಿ ರಂಟೆಯು ಹೊಡಿದು ಬೇಕಾದಷ್ಟು ಮಿದು ಮಾಡ ಬಹುದು. ಜಡ್ಡೀ ಭೂಮಿಯೇ ಬತ್ತ ಬೆಳೆಯುವ ಮುಖ್ಯ ಭೂಮಿಯೆನಿಸುತ್ತದೆ. ಈ ಜಡ್ಡೀ

ಭೂಮಿಯೇ ಕಾನಡಾ ಜಿಲ್ಲೆಯ ಬೆಟ್ಟದ ಭೂಮಿಯೆಂದು ಹೇಳ ಬಹುದು. ಇದಕ್ಕೆ ಕಾನಡಾ ಜಿಲ್ಲೆಯ ಘಟ್ಟದ ಮೇಲಿನ ಪ್ರದೇಶಗಳಲ್ಲಿ ತೋರೀ ಭೂಮಿಯೆಂತಲೂ ಅನ್ನು ವರು. ಇವೆಲ್ಲ ಮುಸಾಲಿಯ ಭೇದಗಳೇ ಇರುತ್ತವೆ.

ಕಾನಡಾ ಜಿಲ್ಲೆಯ ಸಿದ್ದಾಪುರ, ಸಿರಸೀ ತಾಲೂಕುಗಳು; ಧಾರವಾಡ ಜಿಲ್ಲೆಯ ಕೋಡ, ಹಾನಗಲ್ಲು, ಬಂಕಾಪುರ, ಹುಬ್ಬಳ್ಳೀ ತಾಲೂಕುಗಳು; ಬೆಳಗಾವೀ ಜಿಲ್ಲೆಯ ಬೆಳಗಾವಿ, ಚಿಕ್ಕೋಡಿ, ತಾಲೂಕುಗಳು; ಮೇಲೆ ಹೇಳಿದ ನಾಲ್ಕು ಮಲ್ಲಾಡದ ತಾಲೂ ಕುಗಳ ಪೂರ್ವ ಭಾಗಗಳು; ಇಷ್ಟೆಲ್ಲ ಪ್ರದೇಶವು ಮಲ್ಲಾಡದ ಶರಗೆನಿಸುತ್ತದೆ. ಈ ಪ್ರದೇ ಶದಲ್ಲಿ ಗುಡ್ಡಗಳು ಮಲ್ಲಾಡಕ್ಕಿಂತ ಕಡಿಮೆ, ಮಳೆ ಮಧ್ಯಮ, ಭೂಮಿ ಮುಸಾಲಿ ಇಲ್ಲವೆ ಯೆರೆ ನೆಲ. ಕೆಲ ಕೆಲವು ಕಡೆಯಲ್ಲಿ ಒಂದೇ ಹೊಲದೊಳಗೆ ಕೆಂಪು ಭೂಮಿಯನ್ನೂ ಯೆರೆ ಭೂಮಿಯನ್ನೂ ಕಾಣ ಬಹುದು. ಕೆಂಪು ಭೂಮಿಯಲ್ಲಿ ಮಳೆ ಬಹಳ ಇದ್ದಲ್ಲಿ ಭತ್ತವನ್ನು ಬಿತ್ತುವರು, ಕಡಿಮೆ ಇದ್ದಲ್ಲಿ ಮುಂಗಾರಿಯ ಧಾನ್ಯಗಳನ್ನು ಬಿತ್ತುವರು. ಕೆಂಪು ಕೂಡಿದ ಕರೆ ಭೂಮಿಗೆ ಬೆಳಗಾವೀ ಜಿಲ್ಲೆಯಲ್ಲಿ ಮೋವತ ಯೆಂದೆನ್ನುವರು; ಕಲ್ಲಿನ ಥರದ ಮೇಲೆ ಇರುವ ತಿಳುವಾದ ಕರೆ ಭೂಮಿಗೆ ಕರಕ ಭೂಮಿ ಯೆಂದೆನ್ನುವರು; ಸಣ್ಣಂಥ ಸುಣ್ಣದ ಹರಳು ಕೂಡಿದ ಬಹು ಜಿಗಟಾದ ಯೆರೆ ಭೂಮಿಗೆ ಕರ್ಲವೆಂದೆನ್ನುವರು; ನದೀ ತೀರದ ಸೂಸು ಮಣ್ಣಿನ ಯೆರೆ ಭೂಮಿಗೆ ಮಳೀ ಯೆಂದೆನ್ನುವರು. ಕರ್ಲ ಭೂಮಿಯು ಮೇಲೆ ಹೇಳಿದ ಜಡ್ಡೀ ಭೂಮಿಯಂತೆ ಬಿರುಸಾಯಿತೆಂದರೆ ಬೇಗ ತೊಯ್ಯುವದಿಲ್ಲ. ಮಳೆ ಬಹ ಳ ಆದರೆ ಮಾತ್ರ ಇದರಲ್ಲಿ ಪೈರು ವೊಳಿತಾಗಿ ಬರುವದು. ನದೀ ತೀರದ ಮಳೀ ಭೂಮಿ ಯು ಮೇಲಾದದ್ದಿರುತ್ತದೆ. ಯೆರೆ ಭೂಮಿಯಲ್ಲಿ ತಕ್ಕಷ್ಟು ಮಳೆಯಾದರೆ ಮುಂಗಾರಿ, ಹಿಂಗಾರಿ, ಯೆರಡು ಪೈರುಗಳು ಬರುತ್ತವೆ. ಹಲ ಕೆಲವು ಕಡೆಯಲ್ಲಿ ವೊಡ್ಡು ಹಾಕಿ ನೀರು ಕಟ್ಟಿ ಬತ್ತವನ್ನು ಸಹ ಬಿತ್ತುವರು. ಆದರೆ ಬತ್ತದ ಪೈರು ಯೆರೆ ಭೂಮಿಯಲ್ಲಿ ಯೆಷ್ಟು ಶ್ರಮ ಮಾಡಿದರೂ ಬರತಕ್ಕಂತೆ ಬರುವದಿಲ್ಲ, ಮೇಲಾದ ಬತ್ತವೂ ಹುಟ್ಟು ವದಿಲ್ಲ.

ಧಾರವಾಡ, ಬೆಳಗಾವೀ ಜಿಲ್ಲೆಗಳ ಉಳಿದ ಪೂರ್ವ ಭಾಗದ ತಾಲೂಕುಗಳೂ, ಇಡೀ ವಿಜಾಪುರ ಜಿಲ್ಲೆಯೂ ಬೈಲು ಶೀಮೆಯೆನಿಸುತ್ತದೆ. ಇದರಲ್ಲಿ ಗುಡ್ಡಗಳೂ ಮಳೆ ಯೂ ಬಹು ಕಡಿಮೆ, ಭೂಮಿ ಯೆರೆ ನೆಲ. ಕಪ್ಪತ ಗುಡ್ಡ, ಯೆಲ್ಲಮ್ಮನ ಗುಡ್ಡ, ಬಾದಾ ಮಿಯ ಗುಡ್ಡ, ಗೋಕಾವಿಯ ಗುಡ್ಡ. ಇಂಥಾ ಅಲ್ಪ ಸ್ವಲ್ಪ ಗುಡ್ಡಗಾಡು ಶೀಮೆಗಳ ನೆರೆಯ ಪ್ರದೇಶವಷ್ಟು ಮಾತ್ರ ಮುಸಾರಿಯ ನೆಲವಿರುತ್ತದೆ. ಚಿಕ್ಕೋಡೀ ತಾಲೂಕಿನಲ್ಲಿ ಯೂ ಪರಸಗಡ ತಾಲೂಕಿನಲ್ಲಿಯೂ ಉಸುಬು ಕೂಡಿದ ಕೆಂಪು ಭೂಮಿ ಇರುತ್ತದೆ; ಅದಕ್ಕೆ ಗೊಬ್ಬರವೂ ಶ್ರಮವೂ ಬಹಳ ಬೇಕು. ಧಾರವಾಡ ಜಿಲ್ಲೆಯ ಯೆರೆ ಭೂಮಿ ಯು ಹತ್ತಿಯ ಬೆಳೆಗೆ ಹೆಸರಾದದ್ದಿರುತ್ತದೆ. ವಿಜಾಪುರ ಜಿಲ್ಲೆಯ ಡೋಣ ಸಾಲಿನ ಯೆರೆ ಭೂಮಿಯು ಕಾಳಿನ ಪೈರಿಗೆ ಹೆಸರಾದದ್ದಿರುತ್ತದೆ. "ಡೋಣಿ ಬೆಳೆದರೆ ಓಣೆಲ್ಲ ಜೋಳ" ಯೆಂಬ ಗಾದೆಯು ಆ ಜಿಲ್ಲೆಯಲ್ಲಿ ಪ್ರಸಿದ್ಧವಿರುತ್ತದೆ. ಯೆರೆ ಭೂಮಿಗೆ ವೊಮ್ಮೆ ವೊಳಿ

ತಾಗಿ ಮಳೆಯಾಯಿತೆಂದರೆ ನೆಲದೊಳಗಿನ ತೇವು ಯೆರಡು ಮೂರು ತಿಂಗಳಿನ ವರೆಗೆ ಆರುವದಿಲ್ಲ. ಅದರಿಂದ ವೊಂದೇ ದೊಡ್ಡ ಮಳೆಯಾದರೆ ಆ ಭೂಮಿಯಲ್ಲಿ ಪೈರು ಬರುತ್ತದೆ. ಇದಲ್ಲದೆ ಹಸೀ ನೆಲವು ಬೇಸಿಗೆಯಲ್ಲಿ ಆರಿದ ಹಾಗೆ ಬಿರಿಯುತ್ತ ಹೋಗುತ್ತದೆ. ನಾಲ್ಕಾರು ಫೂಟಿನ ವರೆಗೆ ಆಳವಾದ ಬಿರುಕುಗಳಲ್ಲಿ ಹವೆ ಶೇರಿ, ಕೆಳಗಿನ ಮಣ್ಣಿನ ಗುಣವನ್ನು ಸುಧಾರಿಸುತ್ತದೆ; ಮೊದಲಿನ ಮಳೆಗೆ ಮೇಲಿನ ಸೂಸು ಮಣ್ಣು ಹರಿದು ಹೋಗಿ ಬಿರುಕುಗಳಲ್ಲಿ ಶೇರುವದರಿಂದ ಹೊಸ ಮಣ್ಣು ಮೇಲೆ ಉಳಿಯುತ್ತದೆ. ಆದ್ದರಿಂದ ಯೆರೆಗೆ ಬಹಳ ಗೊಬ್ಬರ ಹಾಕುವ ಪ್ರಯೋಜನವೂ ಬಹಳ ಶ್ರಮ ಮಾಡುವ ಪ್ರಯೋಜನವೂ ಬೀಳುವದಿಲ್ಲ. ಆದರೆ ಬೈಲು ಶೀಮೆಯಲ್ಲಿ, ವಿಶೇಷವಾಗಿ ವಿಜಾಪುರ ಜಿಲ್ಲೆಯಲ್ಲಿ ದೊಡ್ಡ ಮಳೆಯಾಗುವದು ಅಪರೂಪ. ಒಕ್ಕಲಿಗರು ಚಾತಕದಂತೆ ಮಳೆಯ ದಾರೀ ನೋಡುತ್ತಿರುತ್ತಾರೆ. ಈ ಶೀಮೆಯಲ್ಲಿ ವಾಡಿಕೆಯಾಗಿ ಮೂರು ನಾಲ್ಕು ವರ್ಷಕ್ಕೊಮ್ಮೆ ತಕ್ಕಷ್ಟು ಮಳೆಯಾಗಿ ಪೈರು ವೊಳಿತಾಗಿ ಬರುತ್ತದೆಂದು ಹೇಳುತ್ತಾರೆ.

## ಭೂಮಿಯ ವಿವರ.

| | ಧಾರವಾಡ. | | ಬೆಳಗಾವಿ. | | ವಿಜಾಪುರ. | | ಕಾನಡಾ. |
|---|---|---|---|---|---|---|---|
| | ಎಕರು. | ಶೇಕಡಾ. | ಎಕರು. | ಶೇಕಡಾ. | ಎಕರು. | ಶೇಕಡಾ. | |
| ಒಟ್ಟು ಭೂಮಿ..... | ೨೯೫೩೦೩೭ | ೧೦೦ | ,, | ,, | ೩೬೭೦೨೯೧ | ೧೦೦ | ಈ ಜಿಲ್ಲೆಯಲ್ಲಿ ಅಡವಿಯೇ ಬಹಳ ಹಬ್ಬಿದೆ. ವೋಜಣೀ ಆದ ಜಮಾನು ೩೩೦೦೦೦ ಎಕರು. ಇದು ವೊಟ್ಟು ಜಿಲ್ಲೆಯ ಜಮೀನಿನಲ್ಲಿ ಶೇಕಡಾ ೧೨ಕ್ಕಿಂತ ಹೆಚ್ಚಿಲ್ಲೆಂದು ಅಜಮಾಸು ಇರುತ್ತದೆ. ಇಷ್ಟಕ್ಕಿಂತ ಹೆಚ್ಚಿಗೇನು ತಿಳಿದಿಲ್ಲ. |
| ವೋಜಣೀ ಆದದ್ದು.. | ೨೮೫೮೬೭೮ | ೯೬·೮೦ | ೨೯೭೯೮೪೦ | ೧೦೦ | ೩೫೯೬೮೨೦ | ೯೭·೯೯ | |
| ಇನಾಮು ..... | ೭೯೧೦೩೨ | ೩೩·೨೯ | ೧೧೬೩೭೩೮ | ೩೯·೦೫ | ೧೦೮೦೭೭೦ | ೩೫·೨೦ | |
| ಸರಕಾರೀ..... | ೨೦೬೭೬೪೬ | ೬೩·೫೩ | ೧೮೧೬೧೦೨ | ೬೩·೯೩ | ೨೫೦೬೦೫೦ | ೬೨·೯೭ | |
| ಪೈರು ಬರುವಂಥಾದ್ದು . | ೧೬೫೨೨೧೬ | ೫೫·೯೪ | ೧೧೭೯೩೦೦ | ೪೨·೫೭ | ೨೧೬೭೫೨೫ | ೬೫·೨೯ | |
| ಸಾಗು....... | ೧೫೩೦೧೧ | ೫೦·೮೯ | ೧೦೭೨೮೨೦ | ೪೧·೦೭ | ೧೮೧೫೨೭೨ | ೬೨·೨೬ | |
| ಪಡ........ | ೧೪೯೨೦೫ | ೫·೦೫ | ೧೦೬೪೮೦ | ೧·೫೦ | ೩೫೨೨೫೩ | ೩·೦೩ | |
| ಪೈರು ಬಾರದ್ದು .... | ೪೨೮೮೨ | ೧·೫೦ | ೧೫೬೫೭೨ | ೫·೨೫ | ೧೦೭೨೬೬ | ೩·೯೮ | |
| ಅಡವಿ, ಹುಲ್ಲು .... | ೨೨೩೭೭೪ | ೭·೮೨ | ೩೯೮೭೨೦ | ೧೩·೩೮ | ೧೪೬೨೮೯ | ೪·೫೭ | |
| ಗ್ರಾಮ, ಹೊಳೆ, ದಾರಿ. | ೧೫೧೨೨೭ | ೫·೨೯ | ೮೧೫೧೦ | ೨·೭೩ | ೯೪೯೬೮ | ೨·೯೬ | |

## ಒಕ್ಕಲತನದ ಸಾಹಿತ್ಯ (೧೮೮೨—೮೩.)

| | ಧಾರವಾಡ. | ಬೆಳಗಾವಿ. | ವಿಜಾಪುರ. | ಕಾನಡಾ. |
|---|---|---|---|---|
| ಭಕಡಿ .... | ೪೦೮೭೨ | ೨೨೫೧೦ | ೯೮೩೯ | ಘಟ್ಟದ ಕೆಳಗೆ ಯೆತ್ತು ಆಕಳು ಸ್ವಲ್ಪ ಕಿರಿ ಜಾತಿಯವು. ಯೆಮ್ಮೆ ಕೋಣಗಳು ಅಪರೂಪ. ಭಕಡಿಗಳು ಬಹಳ ಕಡಿಮೆ, ರಂಟೆಗಳು ಸಣ್ಣವು. ರೈತರು ದನಗಳನ್ನು ವೊಳೆತಾಗಿ ಜೋಪಾನ ಮಾಡುವದಿಲ್ಲ. ಒಣಗಿದ ಯೆಲೆ, ಹುಲ್ಲು ಇವೇ ಮುಖ್ಯ ಗೊಬ್ಬರ. ಘಟ್ಟದ ಮೇಲೆ ದನಗಳು ಹೆಚ್ಚು ಕಸುವುಳ್ಳವು. ಆದರೆ ಹವೆಯು ಅನಾರೋಗ್ಯಕರವಾದದ್ದರಿಂದ ರೈತರಲ್ಲಿ ಚುರುಕುತನವಿಲ್ಲ, ಕಸುವಿಲ್ಲ. ಒಕ್ಕಲಿಗರು ಪರ ಪೇಟೆಗೆ ಮಾರಾಟಕ್ಕೆ ಹೋಗುವದಿಲ್ಲ. ವ್ಯಾಪಾರಸ್ಥರೇ ಅವರ ಮನೆಗೆ ಹೋಗಿ ಇಲ್ಲವೆ ಶಿರಸಿಯಲ್ಲಿ ಅವರ ಸರಕುಗಳನ್ನು ಕೊಳ್ಳುವರು. |
| ರಂಟೆ..... | ೮೯೩೭೩ | ೬೦೨೦೪ | ೫೦೯೧೬ | |
| ಯೆತ್ತು.... | ೨೫೮೫೧೦ | ೨೦೬೩೧೩ | ೨೦೧೭೫೨ | |
| ಆಕಳು ... | ೧೫೧೩೭೯ | ೧೨೭೦೮೯ | ೧೦೪೯೪೮ | |
| ಕೋಣ ... | ೪೦೫೨೩ | ೪೮೭೪೪ | ೨೫೭೯೦ | |
| ಯೆಮ್ಮೆ.... | ೮೩೪೫೨ | ೮೯೯೭೫ | ೬೭೪೨೩ | |
| ಕುದುರೆ ... | ೫೪೭೮ | ೬೨೧೮ | ೮೫೦೫ | |
| ಕತ್ತೆ ..... | ೬೮೧೯ | ೩೫೯೮ | ೪೯೨೩ | |
| ಕುರಿ, ಆಡು . | ೨೩೧೧೨೫ | ೨೮೩೯೩೬ | ೩೬೧೫೧೮ | |

**ಖಾತೆಗಳು.**

ಧಾರವಾಡ ಜಿಲ್ಲೆಯಲ್ಲಿ (೧೮೮೨-೮೩) ಇನಾಮುಗಳು ಸಹಿತ ವೊಟ್ಟಿಗೆ ೭೭೪೭೪ ಖಾತೆಗಳಿವೆ; ಸರಾಸರೀ ಮಾನದಿಂದ ವೊಂದು ಖಾತೆಯು ೨೮ ಯೆಕರಿನದಾಗುತ್ತದೆ. ೪೦೦ ಯೆಕರಿಗಿಂತ ಹೆಚ್ಚು ಭೂಮಿಯ ಖಾತೇ೦ ಛರು ೧೦೮ ಜನರುಂಟು.

ಬೆಳಗಾವೀ ಜಿಲ್ಲೆಯಲ್ಲಿ ಇನಾಮುಗಳು ಸಹಿತ ವೊಟ್ಟಿಗೆ ೬೩೨೦೧ ಖಾತೆಗಳಿವೆ; ಸರಾಸರೀ ಮಾನದಿಂದ ವೊಂದೊಂದು ಖಾತೆಯು ೨೫·೫೦ ಯೆಕರಿನದಾಗುತ್ತದೆ. ೨೦೦ ರಿಂದ ೫೦೦ ವರೆಗೆ ಯೆಕರಿನ ಖಾತೆದಾರರು ೩೭೮ ಜನರು, ೫೦೦ ಯೆಕರಿಗಿಂತ ಹೆಚ್ಚು ಭೂಮಿಯ ಖಾತೇದಾರರು ೮೪ ಜನರು ಇರುತ್ತಾರೆ.

ವಿಜಾಪುರ ಜಿಲ್ಲೆಯಲ್ಲಿ ಇನಾಮುಗಳು ಸಹಿತ ವೊಟ್ಟಿಗೆ ೬೫೪೫೨ ಖಾತೆಗಳಿವೆ; ಸರಾಸರೀ ಮಾನದಿಂದ ವೊಂದೊಂದು ಖಾತೆಯು ೩೮·೧೯ ಯೆಕರಿನದಾಗುತ್ತದೆ. ೪೦೦ ಯೆಕರಿಗಿಂತ ಹೆಚ್ಚು ಭೂಮಿಯ ಖಾತೇದಾರರು ೧೨೫ ಜನರುಂಟು.

ಕಾನಡಾ ಜಿಲ್ಲೆಯಲ್ಲಿ ಮೊಜಣೀ ಆಗುವ ಪೂರ್ವದಲ್ಲಿ ವೊಂದು ಯೆಕರಿನ ೫ನೇ ಭಾಗದಿಂದ ೧೬೦೦ ಯೆಕರುಗಳ ವರೆಗೆ ಖಾತೆಗಳ ವಿಸ್ತಾರವಿತ್ತು; ಸರಾಸರೀ ಮಾನ

ದಿಂದ ವೊಂದೊಂದು ಖಾತೆಯು ೫೦೦ ಯೆಕರಿನದಾಗುತ್ತಿತ್ತು. ಆದರೆ ಈಗ ಭೂಮಿಯಲ್ಲಿ ಸಣ್ಣ ಸಣ್ಣ ಭಾಗಗಳನ್ನು ಮಾಡಿ ಅವುಗಳಿಗೆ ಬೇರೆ ಬೇರೆ ನಂಬರುಗಳನ್ನು ಹಾಕಿದ್ದಾರೆ.

**ಗಳೆಯ ಸಾಮಾನು.**

ಎಲ್ಲ ಕಡೆಯಲ್ಲಿ ಉಪಯೋಗಿಸಲ್ಪಡುವ ಮುಖ್ಯ ಗಳೆಯ ಸಾಮಾನುಗಳು— ನೇಗಲು, ರಂಟೆ, ಕುಂಟೆ, ಯೆಡೆಯು ಕುಂಟೆ, ಕೂರಿಗೆ, ಬಾಯಿಗುದ್ದಲಿ, ಕುಡಗೋಲು, ಖುರ್ಪೆ. ಬತ್ತದ ಭೂಮಿಯಲ್ಲಿ ಹೆಂಟೆಗಳನ್ನು ವೊಡೆಯಲಿಕ್ಕೆ ಡೋಣಿಯನ್ನು ಹೊಡಿಯುವರು. ಸುಮಾರು ವೊಂದು ಫೂಟು ಗಡುತರವಾದ ಕೊರಡನ್ನು ಅರ್ಧ ಕೆತ್ತಿ ಹರುವು ಮಾಡಿ, ಆ ಹರವು ಮೈಯಲ್ಲಿ ಡೋಣಿಯ ಹಾಗೆ ತಗ್ಗು ತೋಡುವರು. ಆ ತಗ್ಗಿನ ಮೈಯನ್ನು ಕೆಳಗೆ ಮಾಡಿ, ಕುಂಟೇ ಹೊಡಿದ ಹಾಗೆ ಡೋಣಿಯನ್ನು ತಿರುಗಿಸುವರು. ಈ ಡೋಣಿಯು ಕುಂಟೆಯ ದಿಂಡಿನಷ್ಟೇ ಉದ್ದ ಇರುತ್ತದೆ. ಈ ಯಾವತ್ತು ಗಳೆಯ ಸಾಮಾನುಗಳನ್ನು ವಾಡಿಕೆಯಾಗಿ ಜಾಲೀ ಕಟ್ಟಿಗೆಯಿಂದ ಮಾಡುವರು. ಕರಿಕೆಯ ಹೊಲವನ್ನು ಉದ್ದ, ಅಡ್ಡ, ಯೆರಡು ಮೈಯಲ್ಲಿ ಯೆಂಟು ಯೆತ್ತಿನ ನೇಗಲು ಹೊಡಿದರೆ, ಸುಮಾರು ೧೫ ಇಂಚಿನ ವರೆಗೆ ಇಳಿದ ಬೇರುಗಳು ಕಿತ್ತಿ ಬಿದ್ದು, ಹೊಲವು ತಕ್ಕಮಟ್ಟಿಗೆ ಹಸನಾಗುತ್ತದೆ. ಯೆಂಟು ಯೆತ್ತು, ಮೂರು ಆಳುಗಳು ಸುಮಾರು ಯೇಳು ತಿಂಗಳು ದುಡಿದರೆ ೨೪ ಯೆಕರು ಭೂಮಿಯು ಹಸನಾಗುತ್ತದೆ. ಸಾಧಾರಣ ತರದ ರಂಟೆಯಿಂದ ಹೆಚ್ಚು ಕಡಿಮೆ ೬ ಇಂಚು ಭೂಮಿಯು ಸಡಿಲಾಗುತ್ತದೆ. ಒಂದು ಯೆತ್ತಿನ ಜೋಡಿಯಿಂದ ೬ರಿಂದ ೮ ಯೆಕರಿನ ವರೆಗೆ ಬತ್ತದ ಭೂಮಿಯನ್ನು, ೧೦ರಿಂದ ೧೫ ಯೆಕರಿನ ವರೆಗೆ ವೊಣ ಮಧ್ಯಮ ಭೂಮಿಯನ್ನು, ೩೦ರಿಂದ ೪೦ ಯೆಕರಿನ ವರೆಗೆ ಮೇಲಾದ ಯೆರೆ ಭೂಮಿಯನ್ನು ಮಾಡ ಬಹುದು.

**ಜಲಾಶಯಗಳು.**

ನಾಲ್ಕೂ ಜಿಲ್ಲೆಗಳಲ್ಲಿ ಹೊಳೆಗಳೂ ಹಳ್ಳಗಳೂ ಅಲ್ಲದೆ ಕೆರೆಗಳೂ, ಹೊಂಡಗಳೂ, ಬಾವಿಗಳೂ, ಕಾವಲಿಗಳೂ ಭೂಮಿಯ ಪೈರಿಗೂ, ಕುಡಿಯುವ ಕೆಲಸಕ್ಕೂ ಉಪಯೋಗಿಸಲ್ಪಡುತ್ತವೆ. ಇವುಗಳ ವಿವರ ಹ್ಯಾಗಂದರೆ.—

## ಜಲಾಶಯಗಳು.

| | ಕೆರೆಗಳೂ ಹೊಂಡಗಳೂ. | ಬಾವಿಗಳು. | | | ಕಾವಲಿಗಳು. |
|---|---|---|---|---|---|
| | | ಇಳಿಯುವವು. | ಸೇದುವವು. | ಒಟ್ಟು. | |
| ಧಾರವಾಡ ........ | ೨೯೭೯ | ೩೦೯೯ | ೮೯೦೩ | ೧೨೦೦೨ | ೪ |
| ಬೆಳಗಾವಿ.......... | ೬೬೩ | ೩೩೭೪ | ೮೪೪೪ | ೧೧೮೧೮ | ,, |
| ವಿಜಾಪುರ ........ | ೩೫೫ | ೩೫೭೫ | ೫೪೪ | ೬೧೧೯ | ,, |
| ಕಾನಡಾ ......... | ೭೬೪೭ | ೫೯೩ | ೨೪೦೮೭ | ೨೪೬೮೦ | ,, |

ಹೆಸರಾದ ದೊಡ್ಡ ದೊಡ್ಡ ಕೆರೆಗಳ ಹೊರ್ತು ಉಳಿದ ಯಾವತ್ತು ಕೆರೆ ಹೊಂಡಗಳು ಬಹುತರ ಮಳೆಗಾಲದಲ್ಲಿ ತುಂಬಿ ಬೇಸಿಗೆಯಲ್ಲಿ ಬತ್ತುವಂಥವೇ ಇರುತ್ತವೆ. ಕೆರೆ ಹೊಂಡಗಳ ನೀರು ಬತ್ತದ ಭೂಮಿಗೂ ತೋಟಗಳಿಗೂ ಮಾತ್ರ ಆಗುತ್ತದೆ; ಒಣ ಕಾಳಿನ ಭೂಮಿಗೆ ಆಗುವದಿಲ್ಲ. ಧಾರವಾಡ ಜಿಲ್ಲೆಯಲ್ಲಿ ಮುಗದ, ಹಾವೇರಿ, ಡಂಬಳ, ನರಗುಂದಗಳ ಕೆರೆಗಳು ಹೆಸರಾಗಿರುತ್ತವೆ; ವಿಜಾಪುರ ಜಿಲ್ಲೆಯಲ್ಲಿ ಮಮದಾಪುರದ ಕೆರೆ, ಬನಶಂಕರಿಯ ಹೊಂಡ, ಇವೆರಡು ಹೆಸರಾಗಿರುತ್ತವೆ. ಇವುಗಳನ್ನು ೧೪ನೇ ಭಾಗದಲ್ಲಿ ಆಯಾ ಗ್ರಾಮದ ವರ್ಣನೆಯಲ್ಲಿ ಸವಿಸ್ತಾರವಾಗಿ ವಿವರಿಸಿದ್ದೇವೆ. ವಿಜಾಪುರ ಜಿಲ್ಲೆಯಲ್ಲಿ ವಿಜಾಪುರದಿಂದ ೧೦ ಮೈಲಿನ ಮೇಲೆ ಡೋಣಿಯ ದಂಡೆಯಲ್ಲಿ ಹೊಸದಾಗಿ ಕಟ್ಟಿಸಲಿಕ್ಕೆ ಆಲೋಚಿಸಿದ ಕೆರೆಯ ವಿವರವನ್ನೂ, ಮುಚಖಂಡಿಯ ಬಳಿಯಲ್ಲಿ ಕಟ್ಟಿಸಿದ ಹೊಸ ಕೆರೆಯ ವಿವರವನ್ನೂ ಅದೇ ಭಾಗದಲ್ಲಿ ಕೊಟ್ಟಿದ್ದೇವೆ.

ಬಾವಿಗಳ ನೀರು ಕುಡಿಯಲಿಕ್ಕೂ ತೋಟಗಳಿಗೂ ಉಪಯೋಗಿಸುತ್ತದೆ. ಕೆರೆ ಹೊಂಡಗಳ ನೆರೆ ಹೊರೆಯಲ್ಲಿದ್ದ ಭಾವಿಗಳ ನೀರು ಆ ಕೆರೆ ಹೊಂಡಗಳು ಬತ್ತಿದ ಕೂಡಲೆ ಬತ್ತುತ್ತದೆ. ಬಾವಿಗಳ ಆಳವು ವಿಜಾಪುರ ಜಿಲ್ಲೆಯಲ್ಲಿ ೨೦ರಿಂದ ೧೦೦ ಫೂಟನ ವರೆಗೆ, ಬೆಳಗಾವೀ ಜಿಲ್ಲೆಯಲ್ಲಿ ೫ರಿಂದ ೧೫೦ ಫೂಟನ ವರೆಗೆ, ಧಾರವಾಡ ಜಿಲ್ಲೆಯಲ್ಲಿ ೧೫ರಿಂದ ೬೦ ಫೂಟನ ವರೆಗೆ ಇರುತ್ತದೆ. ಮಲ್ಲಾಡದ ಪ್ರದೇಶದಲ್ಲಿ ಬಾವಿಗಳು ಬಹಳಾದರೆ ೬೦ ಫೂಟಗಿಂತ ಹೆಚ್ಚು ಆಳವಿರುವದಿಲ್ಲ; ಘಟ್ಟದ ಕೆಳಗೆ ಇದಕ್ಕೂ ಕಡಿಮೆ. ಮಲ್ಲಾಡದ ಶರಗಿನ ಪ್ರದೇಶಗಳಲ್ಲಿ ೧೦೦ ಫೂಟನ ವರೆಗೆ ಆಳವಿರುತ್ತವೆ. ಆದರೆ ಬೈಲು ಶೀಮೆಯಲ್ಲಿ ಹಲಕೆಲವು ಬಾವಿಗಳು ೧೫೦ ಫೂಟಗಿಂತಲೂ ಹೆಚ್ಚು ಆಳವಿರುತ್ತವೆ. ಈ ಬಾವಿಗಳ ನೀರು ಬೇಸಿಗೆ ಬಲಿತ ಹಾಗೆ ಸೌಳಾಗುತ್ತ ಹೋಗುತ್ತದೆ. ಸವದತ್ತಿಯಲ್ಲಿಯೂ ನವಲಗುಂದದಲ್ಲಿಯೂ ಬಾವಿಗಳ ಆಳವು ೧೫೦ ಫೂಟಗಿಂತ ಕಡಿಮೆ ಇಲ್ಲ.

ಧಾರವಾಡ ಜಿಲ್ಲೆಯಲ್ಲಿ ಪುರಾತನ ಕಾಲದಲ್ಲಿ ಕಟ್ಟಿಸಿದ ಕಾವಲಿಗಳು ೪ ಇರುತ್ತವೆ. ಇವುಗಳಲ್ಲಿ ಯೆರಡು ಧರ್ಮಾ ನದಿಯಿಂದ ತೆಗೆಯಲ್ಪಟ್ಟಿವೆ, ಯೆರಡು ಬೇರೆ ಹಳ್ಳಗಳಿಂದ ತೆಗೆಯಲ್ಪಟ್ಟವೆ. ಧರ್ಮಾ ನದಿಯ ಕಾವಲಿಗಳಿಗೆ ಕಾಮನ ಹಳ್ಳಿಯ ಕಾವಲಿಯೆಂತಲೂ ನರೇಗಲ್ಲಿನ ಕಾವಲಿಯೆಂತಲೂ ಅನ್ನುವರು. ಇವುಗಳ ವರ್ಣನೆಯನ್ನು, ಸರಕಾರದವರು ಬಹಳ ಹಣ ವೆಚ್ಚ ಮಾಡಿ ಗೋಕಾವಿಯ ಹತ್ತರ ಘಟಪ್ರಭಾ ಹೊಳೆಯಿಂದ ತೆಗಿದ ಕಾವಲಿಯ ವರ್ಣನೆಯನ್ನೂ ೧೪ನೇ ಭಾಗದಲ್ಲಿ ನೋಡು. ಕಾನಡಾ ಜಿಲ್ಲೆಯಲ್ಲಿ ಸಣ್ಣ ಸಣ್ಣ ಸರುವುಗಳಿಗೆ ಬೇಸಿಗೆಯಲ್ಲಿ ಮಣ್ಣು ಗಿಡ ಮುಂತಾದವುಗಳ ವೊಡ್ಡುಗಳನ್ನು ಹಾಕಿ ಕಾವಲಿಯಿಂದ ನೀರು ತಿರುವಿ ಕೊಂಡು ತೋಟಗಳಿಗೆ ವೊಯ್ಯುವರು. ಆ ವೊಡ್ಡುಗಳೂ ಕಾವಲಿಗಳೂ ಮಳೆಗಾಲದಲ್ಲಿ ನಷ್ಟವಾಗುತ್ತವೆ.

ಒಟ್ಟಿಗೆ ಘಟ್ಟದ ಕೆಳಗೂ ಮಲ್ಲಾಡದಲ್ಲಿಯೂ ನೀರಿನ ದುರ್ಭಿಕ್ಷವಿಲ್ಲ; ಮಲ್ಲಾಡದ ಶರಗಿನ ಪ್ರದೇಶದಲ್ಲಿ ದುರ್ಭಿಕ್ಷಕ್ಕೆ ಆರಂಭವಾಗುತ್ತದೆ. ಬೈಲು ಶೀಮೆಯಲ್ಲಿ ಹೊಳೆಗಳ ದಂಡೆಗಳಲ್ಲಿ ಹೊರ್ತಾಗಿ ಯೆಲ್ಲ ಕಡೆಯಲ್ಲಿ ಹೆಚ್ಚಾಗಲಿ ಕಡಿಮೆಯಾಗಲಿ ನೀರಿನ

ತಾಪತ್ರಯವಿದ್ದೇ ಇರುತ್ತದೆ. ಬೆಳಗಾವೀ ಜಿಲ್ಲೆಯಲ್ಲಿ ಗೋಕಾವಿ, ಅಥಣೀ ತಾಲೂಕುಗಳೂ ಧಾರವಾಡ ಜಿಲ್ಲೆಯಲ್ಲಿ ನವಲಗುಂದರೋಣ ತಾಲೂಕುಗಳೂ ನೀರಿನ ತಾಪತ್ರಯದ ಬಗ್ಗೆ ಹೆಸರಾಗಿರುತ್ತವೆ. ಇಡೀ ವಿಜಾಪುರದ ಜಿಲ್ಲೆಯು ಬೈಲು ಶೀಮೆಯೇ ಆದಾಗ್ಯೂ, ಈ ತಾಲೂಕುಗಳಷ್ಟು ನೀರಿನ ವಿಪತ್ತಿಯು ಆ ಜಿಲ್ಲೆಯಲ್ಲಿ ಬಹುತರ ಯೆಲ್ಲಿಯೂ ಇಲ್ಲ. ಆದರೂ ನಾಲ್ಕೆಂಟು ಹಳ್ಳಿಗಳಿಗೆ ಕೂಡಿ ವೊಂದೇ ಬಾವಿ ಇರುವಂಥ ಉದಾಹರಣೆಗಳನ್ನು ಬೈಲು ಶೀಮೆಯಲ್ಲಿ ಬೇಕಾದಲ್ಲಿ ಕಾಣ ಬಹುದು. ಅಲ್ಲಿಯ ಜನರು ರಾತ್ರಿ ಬೆಳತನಕ ಶ್ರಮ ಮಾಡಿ ಯೆರಡೆರಡು ಮೂರು ಮೂರು ಮೈಲಿನ ಮೇಲಿಂದ ಲಗಳಿಗಳಲ್ಲಿ ಇಲ್ಲವೆ ಛಕ್ಕಡಿಗಳಲ್ಲಿ ನೀರು ತರುತ್ತಿರುತ್ತಾರೆ.

**ಗೊಬ್ಬರ.**

ಶಗಣಿ, ಲದ್ದಿ, ವೊಣಯೆಲೆ, ಬೂದಿ, ಕಸ, ಇವೇ ಗೊಬ್ಬರದ ಮುಖ್ಯ ಜಾತಿಗಳು—ಇವುಗಳನ್ನು ವೊಂದು ತಗ್ಗಿನೊಳಗೆ ಕೊಳೆಯ ಹಾಕಿ ಮಳೆಗಾಲದಲ್ಲಿ ಕೊಳಿಸಿ, ಬೇಸಿಗೆಯ ಕಡೆಯಲ್ಲಿ ಹೊಲಗಳಿಗೆ ಹಾಕುವರು. ಹತ್ತಿಯ ಹೊಲಗಳಲ್ಲಿ ಕುರಿಯ ಹಿಂಡುಗಳನ್ನು ಗಿಡಗಳನ್ನು ತಿನ್ನಲಿಕ್ಕೆ ಬಿಟ್ಟು, ಅಲ್ಲೇ ತರಬಿ ಹಿಕ್ಕಿ ಉಚ್ಚಿಗಳ ಗೊಬ್ಬರವು ಅಲ್ಲಿಂದಲ್ಲೇ ಬೀಳುವಂತೆ ಮಾಡುವರು. ಕೆಲವರು ವೊದಲಿನ ಮಳೆ ಬಿದ್ದ ಕೂಡಲೆ ಗೂರೆಳ್ಳಿನಂಥ ಬೇಗ ಬೆಳೆಯುವ ಕಾಳು ಬಿತ್ತಿ ಅದು ವೊಳಿತಾಗಿ ಬೆಳೆದ ಬಳಿಕ ಗಂಟೆಯ ಹೊಡಿದು ಗಿಡಗಳನ್ನು ನೆಲದೊಳಗೆ ಕೂಡಿಸಿ ಬಿಡುವರು. ಕೆಲವರು ಕೆರೆಗಳಲ್ಲಿಯ ಕೊಳಿತ ಮಣ್ಣು ತಂದು ಹೊಲದಲ್ಲಿ ಹರವುವರು. ಕಾನಡಾ ಜಿಲ್ಲೆಯಲ್ಲಿ ವೊಣ ಯೆಲೆಯ ಗೊಬ್ಬರವೇ ಮುಖ್ಯ. ಪೂರ್ವದಲ್ಲಿ ತೆಂಗು, ಅಡಿಕೆಗಳ ತೋಟಗಳಿಗೆ ಉಪ್ಪು ಹಾಕುವರು. ಈಗ ಅದು ಬಹಳ ತುಟ್ಟಿಯಾದ್ದರಿಂದ ದೊರಿದಲ್ಲಿ ಉಪ್ಪಿನ ಮಣ್ಣು ಹಾಕುವರು.

ಕುಮ್ರಿ ಯೆಂಬದೊಂದು ಹೊಸ ಭೂಮಿಯನ್ನು ಪೈರಿಗೆ ತಯಾರು ಮಾಡುವ ರೀತಿಯುಂಟು. ಮಹಾರಾಷ್ಟ್ರರೂ ಕೊಂಕಣದವರೂ ಮಲ್ಲಾಡದ ಗುಡ್ಡ ಗಾಡು ಶೀಮೆಯಲ್ಲಿ ಕುಮ್ರಿ ಭೂಮಿಯನ್ನು ಮಾಡುವರು. ಗುಡ್ಡಗಳ ಇಳಕಲಿನ ಮೇಲೆ ಕಿರಿಗಂಟಿಗಳಿದ್ದ ಸ್ಥಳ ನೋಡಿ ಅಲ್ಲಿಯ ಕಂಟಿಗಳನ್ನೂ ದೊಡ್ಡ ಮರಗಳ ಕೆಳಗಿನ ಟೊಂಗೆಗಳನ್ನೂ ಚಳಿಗಾಲದಲ್ಲಿ ಕಡಿದು ನೆಲದ ಮೇಲೆ ಹಾಸುವರು. ಅವೆಲ್ಲ ಬೇಸಿಗೆಯಲ್ಲಿ ವೊಳಿತಾಗಿ ವೊಣಗಿದವೆಂದರೆ ಮಳೆಗಾಲವಾರಂಭವಾಗುವ ಪೂರ್ವದಲ್ಲಿ ಅವುಗಳನ್ನು ಸುಡುವರು. ಮುಂದೆ ಮೊದಲನೇ ಮಳೆಯಿಂದ ನೆಲವು ತಕ್ಕಷ್ಟು ಹಸಿಯಾಯಿತೆಂದರೆ, ಆ ಬೂದಿಯೊಳಗೆ ರಾಗಿಯನ್ನು ಬಿತ್ತುವರು. ನೆಲವು ಬಹಳ ಬಿರಿಸಿದ್ದರೆ ಮಾತ್ರ ಬಿತ್ತುವ ಪೂರ್ವದಲ್ಲಿ ರಂಟೇ ಹೊಡೆಯುವರು. ಇಷ್ಟರ ಹೊರ್ತು ಬಿತ್ತುವ ಪೂರ್ವದಲ್ಲಿ ಗಳೆಯ ಪ್ರಯೋಜನವು ಬೀಳುವದಿಲ್ಲ. ಮೊದಲಿನ ವರ್ಷ ರಾಗಿಯ ಬೆಳೆ ತಕ್ಕೊಂಡ ಬಳಿಕ ಯೆರಡನೇ ವರ್ಷ ಆ ಭೂಮಿಯಲ್ಲಿ ಸಾವೆಯ ಬೆಳೆ ತಕ್ಕೊಳ್ಳುವರು. ಮೂರನೇ ವರ್ಷಕ್ಕೆ ನೆಲದ ಕಸವು ಹೋಗುವದರಿಂದ ಆ ನೆಲ ಬಿಟ್ಟು ಮತ್ತೊಂದು ಕಡೆಯಲ್ಲಿ ಇದೇ ಪ್ರಕಾರ ಹೊಸ ನೆಲ ತಯಾರು ಮಾಡುವರು. ಮುಂದೆ ಹತ್ತು ಹನ್ನೆರಡು ವರ್ಷಗಳ

ನಂತರ ಮೊದಲಿನ ನೆಲವಲ್ಲಿ ಮೊದಲಿನಂತೆ ಕಂಟಿಗಳು ಬೆಳಿದವೆಂದರೆ, ಅದರಲ್ಲಿ ಮತ್ತ ಕುಮ್ರಿ ಕಡಿದು ಪೈರು ತಕ್ಕೊಳ್ಳುವರು. ಈ ವಿಧದ ಒಕ್ಕಲತನವು ಪೂರ್ವದಲ್ಲಿ ಬಹಳ ನಡಿಯುತ್ತಿತ್ತು. ಆದರೆ ಇದರಿಂದ ಗುಡ್ಡಗಳ ಮೇಲಿನ ಅಡವಿಯು ಬಹಳ ಹಾಳಾಗುವ ಕಾರಣ ಸರಕಾರದವರು ಈಗ ಕೆಲ ಕೆಲವು ಗೊತ್ತು ಮಾಡಿದ ಪ್ರದೇಶಗಳಲ್ಲಿ ಮಾತ್ರ ಕುಮ್ರಿ ಕಡಿಯ ಬಹುದೆಂದು ವಿಧಿಸಿದ್ದಾರೆ.

ಮೇಲಾದ ಯೆರೆ ಭೂಮಿಗೆ ಮೂರು ನಾಲ್ಕು ವರುಷಕೊಮ್ಮೆ ಗೊಬ್ಬರ ಹಾಕಿದರೆ ಸಾಕು. ಆದರೆ ಕಸುವಿಲ್ಲದಂಥ ಕೆಂಪು ಭೂಮಿಗೆ ಪ್ರತಿ ವರ್ಷ ಹಾಕಲಿಕ್ಕೆ ಬೇಕು. ವಿಜಾಪುರ ಜಿಲ್ಲೆಯಲ್ಲಿ ಬತ್ತದ ಭೂಮಿ ಬಹು ಸ್ವಲ್ಪ ಇರುತ್ತದೆ. ಅದಕ್ಕೆ ಗೊಬ್ಬರ ಹಾಕುವದಿಲ್ಲ. ಉಳಿದ ಕಡೆಯಲ್ಲಿ ಬೇರೆ ಯಾವತ್ತು ಪ್ರಕಾರದ ಭೂಮಿಯಂತೆ ಬತ್ತದ ಭೂಮಿಗೂ ಗೊಬ್ಬರ ಹಾಕುವರು. ಇದಲ್ಲದೆ ಪೈರು ಬದಲು ಮಾಡುವದರಿಂದಲೂ ಭೂಮಿಯ ಕಸುವು ಬೆಳೆಯುತ್ತದೆ. ಮುಂಗಾರಿ, ಹಿಂಗಾರಿ, ಯೆರಡೂ ಬೆಳೆಯುವಂಥ ಭೂಮಿಯಲ್ಲಿ ವೊಂದು ವರ್ಷ ಮುಂಗಾರಿಯ ಬಿತ್ತಿದರೆ ಮುಂದಿನ ವರ್ಷ ಹಿಂಗಾರಿಯ ಬಿತ್ತುವರು. ಮುಂಗಾರಿಗೆ ಮಳೆ ನಿಲುಕದಿದ್ದಲ್ಲಿ ವೊಂದು ವರ್ಷ ಬಿಳಿ ಜೋಳ, ಗೋಧಿ, ಕಡ್ಲೆಗಳನ್ನು ಬಿತ್ತಿ ಮರಿ ವರ್ಷ ಹತ್ತಿ, ಯೆಳ್ಳು, ಕುಶಿಬೆ, ಇಂಥಾ ಪೈರುಗಳನ್ನು ತಕ್ಕೊಳ್ಳುವರು. ಕಸುವುಳ್ಳ ಬತ್ತದ ಭೂಮಿಯಲ್ಲಿ ಬತ್ತದ ಬೆಳೆ ಬಂದ ಬಳಿಕ ಬಟ್ಟುಗಡ್ಲೆ ಮುಂತಾದ ಹಗುರು ಪೈರುಗಳನ್ನು ತಕ್ಕೊಳ್ಳುವರು. ಅದರಿಂದ ಭೂಮಿಯ ಕಸುವು ಬೆಳಿಯುವದು. ಬಡ ಭೂಮಿಗೆ ಯೆಕರಿಗೆ ೬೦೦ ಮಣದಂತೆ ಗೊಬ್ಬರ ಬೇಕಾಗುತ್ತದೆ; ಕಸುವುಳ್ಳ ಭೂಮಿಗೆ ೧೦೦ರಿಂದ ೩೦೦ ಮಣದ ವರೆಗೆ ಹಾಕಿದರೆ ಸಾಕು.

ಕರಿಕೆಯ ಹೊಲ ಹಸನು ಮಾಡ ಬೇಕಾದರೆ, ಎಂಟು ಅಥವಾ ಹತ್ತು ಯೆತ್ತಿನ ನೇಗಲು ಯೆರಡು ಅಥವಾ ಮೂರು ವ್ಯ ಹೊಡಿಯಲಿಕ್ಕೆ ಬೇಕು. ೧೪ ಯೆಕರು ಭೂಮಿಯು ನೇಗಲಿನಿಂದ ಹಸನಾಗಲಿಕ್ಕೆ ಸುಮಾರು ೬೦೦ ರೂಪಾಯಿ ವೆಚ್ಚವಾಗುತ್ತದೆ. ನಟ್ಟು ಕಡಿಸಿ ಹಸನು ಮಾಡಿದರೂ ಅಜಮಾಸು ಇಷ್ಟೇ ಹಣ ವೆಚ್ಚವಾಗುತ್ತದೆ. ಪಳೀ ಆರಿಸುವದು ಬೇರೆ. ಹಸನಾದ ಹೊಲದಲ್ಲಿ ಮೊದಲಿನ ವರ್ಷ ವಾಡಿಕೆಯಾಗಿ ಹತ್ತಿಯನ್ನು ಇಲ್ಲವೆ ಜೋಳ ಬಿತ್ತುವರು. ಮೊದಲಿನ ವರ್ಷ ಪೈರು ಚನ್ನಾಗಿ ಕೂಡ್ರುವದಿಲ್ಲ; ಮುಂದಿನ ಯೆರಡು ವರ್ಷ ಸಾಧಾರಣ ಕೂಡ್ರುವದು; ನಾಲ್ಕನೇ ವರ್ಷ ಮಳೆ ನೆಟ್ಟಗಾದರೆ ಭರಪೂರ ಬೆಳೆ ಬರುವದು. ಹಸನಾದ ಕರೆ ಭೂಮಿಯಲ್ಲಿ ವರ್ಷ ವರ್ಷ ರಂಟೇ ಹೊಡಿಯುವ ಪ್ರಯೋಜನವಿಲ್ಲ; ಯೆರಡು ಮೂರು ವರ್ಷಕ್ಕೊಮ್ಮೆ ಹೊಡಿದರೆ ಸಾಕು. ಕೆಂಪು ಭೂಮಿಯಲ್ಲಿ ಕರಿಕೆ ಬೆಳಿಯುವದಿಲ್ಲಾದ ಕಾರಣ ಅದಕ್ಕೆ ನೇಗಲಿನ ಪ್ರಯೋಜನವಿಲ್ಲ; ಆದರೆ ಅದು ಬಿಸಿಲಿನಿಂದ ಕಲ್ಲಿನ ಹಾಗೆ ಬಿರುಸಾಗುತ್ತದಾದ ಕಾರಣ ಅದನ್ನು ಆಗಾಗ್ಗೆ ರಂಟಿಯಿಂದ ಮಿದು ಮಾಡುತ್ತಿರಲಿಕ್ಕೆ ಬೇಕು. ನೇಗಲು ಹೊಡಿದ ಬಳಿಕ ಇಲ್ಲವೆ ನಟ್ಟು ಕಡಿದ ಬಳಿಕ ಮಳೆಯಿಂದ ಹೆಂಟೆಗಳು ಕರಗಿದವೆಂದರೆ ನಾಲ್ಕರ ಕುಂಟಿಯನ್ನು ಹೊಡಿದು, ಬೇರು ಆರಿಸಿ ಆ ಮೇಲೆ ಯೆರಡೆತ್ತಿನ ಕುಂಟಿಯಿಂದ ಚಲಿಸಿದ ಬಳಿಕ

ಭೂಮಿಯು ಬಿತ್ತಲಿಕ್ಕೆ ತಯಾರಾಗುವದು. ರಂಟೀ ಹೊಡಿದ ಭೂಮಿಯನ್ನೂ ಹಸನಿದ್ದ ಕರೆ ಭೂಮಿಯನ್ನೂ ಯೆರಡರ ಕುಂಟೆಯಿಂದ ಚಲಿಸಿ ಬಿತ್ತುವರು. ಕೂರಿಗೆಯಿಂದ ಮುಖ್ಯ ಧಾನ್ಯಗಳನ್ನು ಬಿತ್ತಿದ ಮೇಲೆ ಬೆಳೆ ಸಾಲ ಹೊಡಿದರೆ ಬಿತ್ತುವ ಕೆಲಸ ತೀರಿತು. ಮುಂಗಾರಿಯ ಜೋಳದಲ್ಲಿ ತೊಗರಿ, ಹೆಸರು, ಅಲಸಂದಿ, ಮುಂತಾದ ಬೇಳೆಯ ಕಾಳುಗಳನ್ನು ಅಕ್ಕಡಿಯ ಕೋಲಿನಿಂದ ಬಿತ್ತುವರು. ಬಿತ್ತಿದ ಬಳಿಕ ನಾಟಕೆಯು ಸುಮಾರು ವೊಂದು ಫೂಟು ಯೆತ್ತರಾಗುವದರೊಳಗೆ ಯೆರಡು ಸಾರಿ ಯೆಡೆ ಹೊಡಿದರೆಂದರೆ ಗಳೆಯ ಕೆಲಸ ತೀರಿತು. ತೆನೆಯಾದ ಬಳಿಕ ಹೊಲ ಕಾಯುವದೂ ಬೆಳೆ ಕೊಯ್ಯುವದೂ, ರಾಶೀ ಮಾಡುವದೂ, ಇವೆಲ್ಲ ಸುಗ್ಗಿಯ ಕಾಲದ ಕೆಲಸಗಳಿರುತ್ತವೆ.

ಇಪ್ಪತ್ತೇಳು ಮಹಾ ನಕ್ಷತ್ರಗಳಲ್ಲಿ ಮೊದಲಿನ ವೊಂಬತ್ತು ೧೫ ದಿವಸದವೆಂತಲೂ, ಯೆರಡನೇ ವೊಂಬತ್ತು ೧೪ ದಿವಸದವೆಂತಲೂ, ಕಡೆಯ ವೊಂಬತ್ತು ೧೦ ದಿವಸದವೆಂತಲೂ ವಾಡಿಕೆಯಾಗಿ ಯೆಣಿಸುವರು; ಕೃತ್ತಿಕೆಯಿಂದ ಆಶ್ಲೇಷದ ವರೆಗೆ, ಅಂದರೆ ಸುಮಾರು ೯ನೇ ಮೇಯಿಂದ ೧೪ನೇ ಆಗಸ್ಟದ ವರೆಗೆ ಮುಂಗಾರಿಯ ಬಿತ್ತುವ ಕಾಲವು. ಮೇ ಮುಗಿಯುವ ಪೂರ್ವದಲ್ಲಿ ಬತ್ತ ಬಿತ್ತುವರು. ಪುನರ್ವಸು, ಪುಷ್ಯದಲ್ಲಿ ಜೋಳ ಬಿತ್ತುವರು. ಮಘಾ ನಕ್ಷತ್ರದಿಂದ ಸ್ವಾತಿಯ ವರೆಗೆ, ಅಂದರೆ ೧೫ನೇ ಆಗಸ್ಟದಿಂದ ೩ನೇ ನವಂಬರಿನ ವರೆಗೆ ಹಿಂಗಾರಿಯನ್ನು ಬಿತ್ತುವ ಕಾಲವು. ಇದರ ಆರಂಭದಲ್ಲಿ ಇಲ್ಲವೆ ಮುಂಗಾರಿಯ ಕಾಲದ ಕಡೆಯಲ್ಲಿ ಹತ್ತೀ ಬಿತ್ತುವರು; ಸಪಟಂಬರಿನ ಕಡೆತನಕ ಬಿಳೆ ಜೋಳ, ಗೋಧಿ, ಕಡ್ಲೆಗಳನ್ನು ಬಿತ್ತುವರು. ಹಸ್ತದಿಂದ ಶ್ರವಣದ ವರೆಗೆ ಅಂದರೆ, ೨೫ನೇ ಸಪಟಂಬರಿನಿಂದ ೩ನೇ ಫೇಬ್ರುವಾರಿಯ ವರೆಗೆ ಸುಗ್ಗಿಯ ಕಾಲವು. ಉತ್ತರಾಷಾಢದಿಂದ ರೇವತಿಯ ವರೆಗೆ, ಅಂದರೆ ೯ನೇ ಜನವರಿಯಿಂದ ೧೦ನೇ ಎಪ್ರೀಲಿನ ವರೆಗೆ ಹತ್ತೀ ಬಿಡಿಸುವ ಕಾಲವು. ಅಗಟಂಬರಿನಲ್ಲಿ ಮುಂಗಾರಿಗೂ ಹಿಂಗಾರಿಗೂ ಮಳೆ ಬೇಕು; ಅದರಿಂದ ಮುಂಗಾರಿಯ ಕಾಳು ವೊಳಿತಾಗಿ ತುಂಬುವದು, ಹಿಂಗಾರಿಯ ಸಸಿಯು ಭರದಿಂದ ಬೆಳೆಯುವದು.

ವಿಜಾಪುರ ಜಿಲ್ಲೆಯಲ್ಲಿ ಮುಂಗಾರಿಯ ಮಳೆಯು ತಕ್ಕಷ್ಟು ಬಹುತರ ಆಗುವದಿಲ್ಲ. ಬೆಳಗಾವಿ ಧಾರವಾಡಗಳ ಬೈಲು ಶೀಮೆಯ ನಾಲ್ಕು ತಾಲೂಕುಗಳಲ್ಲಿ ಹಿಂಗಾರಿ ಮಾತ್ರ ಬೆಳೆಯುವದು. ಮಲ್ಲಾಡದ ಶರಗಿನ ಪ್ರದೇಶಗಳಲ್ಲಿ ಮುಂಗಾರಿ, ಹಿಂಗಾರಿ, ಯೆರಡೂ ಪೈರುಗಳು ಬರುತ್ತವೆ. ವಿಶೇಷವಾಗಿ ಕೋಡ, ರಾಣೀಬಿನ್ನೂರು ತಾಲೂಕುಗಳಲ್ಲಿ ಕರಿಸಾಲು ಯೆಂದೆಂದು ಬೀಳುವದಿಲ್ಲ; ಮುಂಗಾರಿಯ ಪೈರು ಬರದಿದ್ದರೆ ಹಿಂಗಾರೀದು ಬರುತ್ತದೆ. ಮಲ್ಲಾಡದಲ್ಲಿಯೂ ಘಟ್ಟದ ಕೆಳಗೂ ಮುಂಗಾರಿಯ ಪೈರುಗಳು ಮಾತ್ರ ಬರುವವು; ಅಲ್ಲಿ ಹಿಂಗಾರಿಯ ಮಳೆ ಬೀಳುವದಿಲ್ಲ.

## ಸನ್ ೧೮೮೧—೮೨ನೇ ವರ್ಷದಲ್ಲಿ ಧಾರವಾಡ, ಬೆಳಗಾವಿ, ವಿಜಾಪುರ ಈ ಮೂರು ಜಿಲ್ಲೆಗಳಲ್ಲಿ ಬೇರೆ ಬೇರೆ ಪೈರುಗಳಿಗೆ ಆಕ್ರಮಿಸಿದ ಭೂಮಿಯ ವಿವರ.

## ಪೈರುಗಳ ಕೋಷ್ಟಕ.

| ಪೈರುಗಳು. | ಧಾರವಾಡ. | ಬೆಳಗಾವಿ. | ವಿಜಾಪುರ. |
|---|---|---|---|
| | ಯೆಕರು. | ಯೆಕರು. | ಯೆಕರು. |
| ಜೋಳ ......... | ೩೮೯೪೧೧ | ೪೨೨೯೪೫ | ೯೪೯೩೮೬ |
| ಶೆಜ್ಜಿ ........... | ೪೦೯೯ | ೫೮೩೮೧ | ೧೩೬೯೨೪ |
| ಗೋಧಿ.......... | ೧೭೪೮೨೭ | ೬೩೪೯೯ | ೯೭೭೪೬ |
| ಬತ್ತ ........... | ೮೫೧೧೭ | ೬೪೭೭೪ | ೫೦೦೪ |
| ನವಣೆ ......... | ೪೭೮೩೦ | ೩೮೦೧೬ | ೯೨೬೯ |
| ಜವಿಗೋಧಿ........ | ,, | ೫೭ | ೬೨೨ |
| ರಾಗಿ ........... | ೨೮೮೫೯ | ೩೦೦೧೬ | ,, |
| ಸಾವಿ .......... | ೧೭೯೧೧ | ೯೪೧೬ | ೩೯೨೬ |
| ಹರೀಕ .......... | ,, | ೪೩೬೦ | ,, |
| ಗೋವಿಂಜೋಳ ..... | ೧ | ೧೯೭೨ | ೩೦೪ |
| ಕಡ್ಲಿ ........... | ೩೩೦೩೫ | ೨೫೫೩೪ | ೩೭೮೬೬ |
| ತೊಗರಿ.......... | ೨೫೫೭೫ | ೨೯೭೫೭ | ೧೪೭೨೦ |
| ಹುರಳಿ .......... | ೨೪೨೦೦ | ೨೩೯೭೫ | ೭೯೨೯ |
| ಹೆಸರು .......... | ೧೪೭೬೦ | ೨೩೮೧ | ೪೩೨ |
| ಬಟ್ಟುಗಡ್ಲಿ ....... | ,, | ೩೩೭೯ | ,, |
| ಉದ್ದು .......... | ೪೨೬ | ೫೬೪ | ,, |
| ಅಗಸಿ .......... | ೧೭೭೩೪ | ೧೫೦೭ | ೨೯೬೯೭ |
| ಯೆಳ್ಳು.......... | ೩೬೯೪ | ೪೬೬೮ | ೧೫೫೨೧ |
| ಸಾಸಿವೆ.......... | ೪೧ | ೧೦೮ | ,, |
| ಕುಸಿಬೆ.......... | ೪೮೯೫೭ | ,, | ೨೫೮೭೬ |
| ಹತ್ತಿ ........... | ೩೫೭೭೦೧ | ೯೧೪೦೭ | ೨೫೫೩೬೭ |
| ಸಣಬು.......... | ೧೨೨೨ | ೯೮೨ | ೪೨೩ |
| ಪುಂಡಿ .......... | ೨೮೭ | ೫೯೯ | ,, |
| ಮೆಣಸಿನ ಕಾಯಿ..... | ೨೮೭೪೮ | ೭೯೬೭ | ೧೬೩೭ |
| ಕಬ್ಬು .......... | ೩೭೪೨ | ೪೧೭೬ | ೧೧೩೫ |
| ತಂಬಾಕ ......... | ೧೨೫೧ | ೯೩೧೪ | ೧೪೬೯ |

ಬತ್ತ ಬಿತ್ತುವ ರೀತಿಗಳು ೫ ಇರುತ್ತವೆ. ೧ನೇ ಅಗಿ ಹಚ್ಚುವ ರೀತಿಯು ಯೆಲ್ಲಕ್ಕೂ ಮೇಲಾದದ್ದು. ಆದರೆ ಇದಕ್ಕೆ ವೆಚ್ಚವೂ ಶ್ರಮವೂ ಬಹಳ ಬೇಕಾಗುವ ಕಾರಣ ವೊಕ್ಕಲಿಗರು ಈ ರೀತಿಯಿಂದ ಬಹಳವಾಗಿ ಬಿತ್ತುವದಿಲ್ಲ.

**ಬತ್ತ.**

ಬೇಸಿಗೆಯ ಕಡೆಯಲ್ಲಿ ಅಗಿ ಹೊಯ್ಯ ತಕ್ಕ ಭೂಮಿಯಲ್ಲಿ ವೊಣಯೆಲೆ, ಕಟ್ಟಿಗೆ, ಹುಲ್ಲು, ಕಸ ಮುಂತಾದವುಗಳನ್ನು ಹರವಿ ಸುಡುವರು. ಅಗಿ ಹಚ್ಚುವ ಭೂಮಿಯನ್ನಾದರೂ ಇದೇ ಪ್ರಕಾರ ತಯಾರು ಮಾಡುವರು. ವೊದಲಿನ ಮಳೆ ಬಿದ್ದ ಕೂಡಲೆ ಅಗಿ ಹೊಯ್ಯುವ ಭೂಮಿಯನ್ನು ಮೂರು ಸಾರಿ ರಂಟೇ ಹೊಡಿದು ಹರಗುವರು. ಹಸಿಯು ವೊಳಿತಾಗಿ ಆದ ಕೂಡಲೆ ಬತ್ತದ ಕಾಳುಗಳನ್ನು ಕೈಯಿಂದ ಆ ಭೂಮಿಯಲ್ಲಿ ದಟ್ಟಾಗಿ ಬಿತ್ತುವರು. ಅಗಿ ಹಚ್ಚುವ ಭೂಮಿಯು ವೊಳಿತಾಗಿ ತೊಯಿದ ಬಳಿಕ ಅದನ್ನಾದರೂ ಮೂರು ಸಾರಿ ರಂಟೇ ಹೊಡಿದು ಹರಗಿ ಹಚ್ಚಲಿಕ್ಕೆ ತಯಾರು ಮಾಡುವರು. ಅಗಿಗಳು ಸುಮಾರು ೫ ವಾರದೊಳಗೆ ಮೊಳದಷ್ಟು ಯೆತ್ತರವಾದ ಬಳಿಕ ಅಗಿ ಹಚ್ಚುವ ಭೂಮಿಯಲ್ಲಿ ಮೇಲೆ ಹೇಳಿದಂತೆ ಗೊಬ್ಬರ ಹರವಿ ತುಳಿಸು ಅದನ್ನು ಕೆಸರೊಳಗೆ ಪೂರಾ ಮುಳುಗಿಸಿ, ಭೂಮಿಯನ್ನು ಸವ ಮಾಡಿ ಕೂರಿಗೆಯಿಂದ ಸಾಲು ಬಿಟ್ಟು, ಜೂನಿನ ಆರಂಭದ ಸುಮಾರಿನಲ್ಲಿ ಅಗಿಗಳನ್ನು ಹಚ್ಚುವರು. ಅಗಿ ಹಚ್ಚಿದ ಬಳಿಕ ಯೆರಡು ಸಾರಿ ಕಳೆ ತೆಗೆಯುವರು. ಈ ಬತ್ತವು ನವಂಬರಿನಲ್ಲಾಗಲಿ ದಿಜಂಬರಿನಲ್ಲಿ ಕೊಯ್ಯಲಿಕ್ಕೆ ಬರುತ್ತದೆ. ೨ನೇ ರೀತಿ ಕೂರಿಗೆಯಿಂದ ಬಿತ್ತುವದು. ಸ್ವಲ್ಪ ಮಳೆಯಾದ ಕೂಡಲೆ ಮುಂವೆ ಬೇಗ ಮಳೆಯಾಗುವ ಹಾಗಿದ್ದಲ್ಲಿ ಈ ರೀತಿಯಿಂದ ಬಿತ್ತುವರು. ಬಿತ್ತಿದ ಬಳಿಕ ವೊಂದು ವಾರದೊಳಗೆ ಮಳೆಯಾಗಲಿಕ್ಕೆ ಬೇಕು; ಇಲ್ಲದಿದ್ದರೆ ಸಸಿಗಳು ವೊಣಗುತ್ತವೆ, ಅವುಗಳನ್ನು ಹಕ್ಕಿಗಳು ತಿನ್ನುತ್ತವೆ. ಆದರೆ ಮೊದಲಿನ ರೀತಿಗಿಂತ ಈ ರೀತಿಯಿಂದ ಬಿತ್ತಿದ ಬೆಳೆ ಕಡಿಮೆ ಬರುವದು. ೩ನೇ ರೀತಿ ಹ್ಯಾಗಂದರೆ, ಆರಂಭದಲ್ಲಿ ಮಳೆ ಬಹಳವಾಗಿ ಕೂರಿಗೆ ನಡಿಯದ ಹಾಗಿದ್ದಲ್ಲಿ ರಂಟೆಯಿಂದ ಸಾಲು ಬಿಟ್ಟು, ಆ ಸಾಲುಗಳಲ್ಲಿ ಕೈಯಿಂದ ಬಿತ್ತುವರು. ಈ ಬಿತ್ತಿಗೆಯ ಪೈರು ಯೆರಡನೇದಕ್ಕಿಂತ ಕಡಿಮೆ. ೪ನೇ ರೀತಿ. ಮೇಲಿನ ಮೂರೂ ರೀತಿಗಳಿಂದ ಬಿತ್ತಲಿಕ್ಕೆ ಅನುಕೂಲವಾಗದಿದ್ದಲ್ಲಿ ಮೊಳಿಕೆ ಬತ್ತವನ್ನು ಬಿತ್ತುವರು. ಒಂದು ತಟ್ಟಿನ ಇಲ್ಲವೆ ಚಾಪೆಯ ಚೀಲಿನಲ್ಲಿ ಬತ್ತ ಹಾಕಿ ಅದನ್ನು ನೀರೊಳಗೆ ಮುಳುಗಿಸಿ ಗಾಳಿ ಆಡದಂಥ ಸ್ಥಳದಲ್ಲಿ ಮೂರು ದಿವಸ ಇಡುವರು; ಅಷ್ಟರಲ್ಲಿ ಮೊಳಿಕೆಗಳೇಳುವವು. ಆ ಮೊಳಿಕೆಯ ಕಾಳುಗಳನ್ನು ವೊಳಿತಾಗಿ ಹಶಿಯಾದ ಭೂಮಿಯಲ್ಲಿ ಕೈಯಿಂದ ಬಿತ್ತುವರು. ೫ನೇದಕ್ಕೆ ಸರದೀ ರೀತಿಯನ್ನುವರು. ಅದು ಹ್ಯಾಗಂದರೆ, ಸ್ವಲ್ಪ ಹಶಿಯಾದ ಭೂಮಿಯಲ್ಲಿ ಬತ್ತವನ್ನು ಕೂರಿಗೆಯಿಂದ ಬಿತ್ತಿ ಸಶಿಗಳು ತಕ್ಕಮಟ್ಟಿಗೆ ದೊಡ್ಡವಾದ ಬಳಿಕ ದಟ್ಟ ಇದ್ದಲ್ಲಿಯ ಸಶಿಗಳನ್ನು ಕಿತ್ತಿ ಅಂಗಲ ವಿದ್ದಲ್ಲಿ ಹಚ್ಚುವರು. ಇದು ಎಲ್ಲಕ್ಕೂ ಕಡೆಯ ರೀತಿ; ಇದರಿಂದ ಬೆಳೆ ಬಂದೀತೆಂಬ ಆಶೆಯು ಬಹು ಕಡಿಮೆ ಇರುತ್ತದೆ.

ವಿಜಾಪುರ ಜಿಲ್ಲೆಯಲ್ಲಿ ಬಾದಾಮಿಯ ತಾಲೂಕಿನಲ್ಲಿ ಮಾತ್ರ ಬತ್ತವನ್ನು ೪ನೇ ರೀತಿ

ಯಿಂದ ಬಿತ್ತುವರು. ಬೆಳಗಾವಿ ಜಿಲ್ಲೆಯಲ್ಲಿ ಖಾನಾಪುರ, ಬೆಳಗಾವಿ, ಸಂಪಗಾವಿ, ಈ ಮೂರು ತಾಲೂಕುಗಳಲ್ಲಿ ಬತ್ತದ ಬೆಳೆಯು ವೊಳಿತಾಗಿ ಬರುತ್ತದೆ. ಧಾರವಾಡ ಜಿಲ್ಲೆಯಲ್ಲಿ ಧಾರವಾಡ, ಕಲಘಟಗೀ, ಹಾನಗಲ್ಲು, ರಾಣೆಬಿನ್ನೂರು, ಕೋಡ, ಈ ತಾಲೂಕುಗಳಲ್ಲಿ ಬತ್ತದ ಬೆಳೆ ಬರುತ್ತದೆ. ಕಾನಡಾ ಜಿಲ್ಲೆಯಲ್ಲಿ ಘಟ್ಟದ ಕೆಳಗೂ ಮೇಲೆಯೂ ಯೆಲ್ಲ ಕಡೆಯಲ್ಲಿ ಬತ್ತದ ಬೆಳೆ ಚನ್ನಾಗಿ ಬರುತ್ತದೆ. ಘಟ್ಟದ ಕೆಳಗೆ ವಾಡಿಕೆಯಾಗಿ ನಾಲ್ಕನೇ ರೀತಿಯಿಂದ ಬಿತ್ತುವರು; ಘಟ್ಟದ ಮೇಲೆ ಕೂರಿಗೆಯಿಂದ ಬಿತ್ತುವದು ವಿಶೇಷ. ಈ ಜಿಲ್ಲೆಯಲ್ಲಿ ವೊಟ್ಟಿಗೆ ೬೪ ಜಾತಿಯ ಬತ್ತ ಬೆಳೆಯುತ್ತದೆ. ಕೆಲವು ಕಸುವುಳ್ಳ ಭೂಮಿಗಳಲ್ಲಿ ವರ್ಷದೊಳಗೆ ಯೆರಡು ಬತ್ತದ ಪೈರುಗಳು ಬರುತ್ತವೆ.

ವಿಜಾಪುರ ಜಿಲ್ಲೆಯಲ್ಲಿ ಯೆಲ್ಲ ಕಡೆಯಲ್ಲಿಯೂ ಜೋಳ ಬಿತ್ತುವರು. ಡೋಣಿ ಸಾಲಿನ ಜೋಳದ ಬೆಳೆಯು ಹೆಸರಾದದ್ದೆಂದು ಹಿಂದೆ ಹೇಳಿದ್ದೇವೆ. ಬಾದಾವಿಯ ತಾಲೂಕಿನಲ್ಲಿ ಮುಂಗಾರಿಯ ಬೆಳೆ ವೊಳಿತಾಗಿ ಬರುತ್ತದೆ. ಉಳಿದ ಕಡೆಯಲ್ಲಿ ಬಿಳಿ ಜೋಳವೇ ವಿಶೇಷ. ಬೆಳಗಾವೀ ಜಿಲ್ಲೆಯಲ್ಲಿ

**ಜೋಳ.**

ಅಥಣಿ, ಪರಸಗಡ, ಚಿಕ್ಕೋಡಿ, ಸಂಪಗಾವಿ, ಗೋಕಾವಿ, ಈ ತಾಲೂಕುಗಳಲ್ಲಿ ಜೋಳದ ಪೈರು ಮುಖ್ಯ. ಧಾರವಾಡ ಜಿಲ್ಲೆಯ ಯಾವತ್ತು ತಾಲೂಕುಗಳಲ್ಲಿ ಜೋಳದ ಬೆಳೆ ವೊಳಿತಾಗಿ ಬರುತ್ತದೆ. ಈ ಜಿಲ್ಲೆಯಲ್ಲಿ ವೊಟ್ಟಿಗೆ ೧೮ ಪ್ರಕಾರದ ಜೋಳ ಬೆಳೆಯುವದು. ಇವುಗಳಲ್ಲಿ ಬಿಳಿ ಜೋಳ, ಕರೆ ಜೋಳ, ಇವೆರಡು ಹಿಂಗಾರಿಯ ಜಾತಿಗಳು; ಉಳಿದ ೧೬ ಜಾತಿಗಳು ಮುಂಗಾರಿಯ ಪೈರುಗಳಿವೆ. ಅವುಗಳ ಹೆಸರುಗಳು—ಮೂರ ತಿಂಗಳ ಜೋಳ, ದೊಡ್ಡ ಜೋಳ, ಉತಳ ಫುಲ್ಗರ, ಚೆಜಕರ, ಕಾಗಿ ಜೋಳ, ನಂದೀಹಾಳ, ಈ ಆರು ಜಾತಿಗಳನ್ನು ಮುಖ್ಯ ಪೈರುಗಳಾಗಿ ಬಿತ್ತುವರು; ಭಗವಂತ ಫುಲ್ಗರ, ಪಟ್ಟಣ ಸಾಳಿ, ಗೌರೀಕುಲ, ಬಸವನ ಪಾದ, ಫುಲ್ಗರ, ಜೆಲ ಕೊಂಜೋಳ ಅಥವಾ ಜೋಗಿ ಜಿಡೀ ಜೋಳ, ಕೆಂಜೋಳ, ಕೊಡಮೂಕನ ಜೋಳ ಈ ಯೆಂಟು ಜಾತಿಗಳನ್ನು ಮುಖ್ಯ ಪೈರುಗಳಾಗಿ, ಇಲ್ಲವೆ ಬೇರೆ ಮುಂಗಾರೀ ಹಿಂಗಾರೀ ಜಾತಿಗಳ ಪೈರಿನಲ್ಲಿ ನಡುನಡುವೆ ಹಲಕೆಲವು ಸಾಲುಗಳಾಗಿ ಬಿತ್ತುವರು; ಹಳವಮೂಕನ ಜೋಳ, ಉಳಕನ ಜೋಳ, ಈ ಯೆರಡು ಜಾತಿಗಳನ್ನು ಬೇರೆ ಜಾತಿಗಳ ಪೈರಿನಲ್ಲಿ ನಡುನಡುವೆ ಸಾಲುಗಳಾಗಿ ಮಾತ್ರ ಬಿತ್ತುವರು. ಇವುಗಳನ್ನು ಹಾಗೇ ಗುಗ್ಗರೀ ಕುದಿಸಿ ತಿನ್ನುವರು, ಬೀಸಿ ರೊಟ್ಟಿಯ ಮಾಡುವದಿಲ್ಲ. ಕಾನಡಾ ಜಿಲ್ಲೆಯ ಶಿರಸಿ ಸಿದ್ದಾಪುರ ತಾಲೂಕುಗಳಲ್ಲಿ ಜೋಳವು ಕೆಲವು ಮಟ್ಟಿಗೆ ಬೆಳೆಯುತ್ತದೆ; ಆದರೆ ಅದನ್ನು ಜಿಲ್ಲೆಯ ಮುಖ್ಯ ಪೈರುಗಳಲ್ಲಿ ಯೆಣಿಸುವದಿಲ್ಲ.

ಗೋಧಿಯು ವಿಜಾಪುರ ಜಿಲ್ಲೆಯಲ್ಲಿ ಬಾಗೇವಾಡಿ, ಸಿಂದಗಿ, ವಿಜಾಪುರ, ಈ ಮೂರು ತಾಲೂಕುಗಳಲ್ಲಿ ವಿಶೇಷವಾಗಿ ಬೆಳೆಯುತ್ತದೆ. ಕೆಂಪು, ಖಪಲಿ, ಹೊಳಿ, ಯೆಂಬ ಮೂರು ಜಾತಿಗಳು ಈ ಜಿಲ್ಲೆಯಲ್ಲಿ ಬೆಳೆಯುತ್ತವೆ. ಕೆಂಪು ಗೋಧಿ ಯೆಲ್ಲಕ್ಕೂ ಶ್ರೇಷ್ಠ, ಯೆರೆ ಭೂಮಿಯಲ್ಲಿ ಸರಸಾಗಿ

**ಗೋಧಿ.**

ಬೆಳೆಯುವದು; ಖಪಲೀ ಗೋಧಿಯನ್ನು ತೋಟಗಳಲ್ಲಿ ಬಿತ್ತುವರು. ಹೊಳಿ ಗೋಧಿ

ಯನ್ನು ಬತ್ತದ ಭೂಮಿಯಲ್ಲಿ ಬತ್ತ ಕೊಯ್ದ ಬಳಿಕ ಬಿತ್ತುವರು; ಇದು ಯೆಲ್ಲಕ್ಕೂ ಕಡಿಮೇ ಜಾತಿ. ಬೆಳಗಾವೀ ಜಿಲ್ಲೆಯಲ್ಲಿ ಖಾನಾಪುರ ಹೊರ್ತಾಗಿ ಉಳಿದ ಆರು ತಾಲೂಕುಗಳಲ್ಲಿ ಮೇಲೆ ಹೇಳಿದ ಮೂರು ಜಾತಿಯ ಗೋಧಿಯು ಬೆಳೆಯುತ್ತದೆ. ಧಾರವಾಡ ಜಿಲ್ಲೆಯಲ್ಲಿ ಗದಗು, ನವಲಗುಂದ, ಹುಬ್ಬಳ್ಳಿ, ರೋಣ, ಧಾರವಾಡ, ಈ ತಾಲೂಕುಗಳಲ್ಲಿ ಗೋಧಿಯು ವೊಳಿತಾಗಿ ಬೆಳೆಯುತ್ತದೆ; ಬಂಕಾಪುರ ತಾಲೂಕಿನಲ್ಲಿ ಈ ಧಾನ್ಯದ ಬೆಳೆಯು ನೆಟ್ಟಗೆ ಬರುವದಿಲ್ಲ. ಕಾನಡಾ ಜಿಲ್ಲೆಯಲ್ಲಿ ಘಟ್ಟದ ಮೇಲೆ ಗೋಧಿಯು ಅಲ್ಪಸ್ವಲ್ಪ ಬೆಳೆಯುತ್ತದೆಂದು ತೋರುತ್ತದೆ.

**ಕಡ್ಲೆ.** ಕಡ್ಲೆಯನ್ನು ಗೋಧಿಯ ಸಂಗಡ, ಇಲ್ಲವೆ ಬೇರೆಯಾಗಿ ಗೋಧೀ ಬಿತ್ತುವ ಭೂಮಿಯಲ್ಲಿ ಯೆಲ್ಲ ಕಡೆಯಲ್ಲಿ ಬಿತ್ತುವರು. ಕಸುವುಳ್ಳ ಬತ್ತದ ಭೂಮಿಯಲ್ಲಿ ಬತ್ತದ ಪೈರು ಕೊಯ್ದ ಬಳಿಕ ಕಡ್ಲೆಯನ್ನು ಬಿತ್ತುವರು. ಯಾವ ಜಿಲ್ಲೆಯಲ್ಲಿಯೂ ಕಡ್ಲೆಯು ಮುಖ್ಯ ಧಾನ್ಯವೆನಿಸುವದಿಲ್ಲ.

**ಹತ್ತಿ.** ಹತ್ತಿಯನ್ನು ವಿಜಾಪುರ ಜಿಲ್ಲೆಯಲ್ಲಿ ಸಿಂದಗಿ, ಬಾಗೇವಾಡಿ, ಮುದ್ದೇಬಿಹಾಳ, ಹುನಗುಂದ, ಈ ತಾಲೂಕುಗಳಲ್ಲಿ ಮುಖ್ಯವಾಗಿ ಬಿತ್ತುವರು; ಇವುಗಳಲ್ಲಿ ಹುನಗುಂದದ ಹತ್ತಿ ಹೆಸರಾದದ್ದು. ಕರೆಹತ್ತಿ, ಜವಾರೀ ಹತ್ತಿ, ವಿಲಾಯತೀ ಹತ್ತಿ, ಈ ಪ್ರಕಾರ ಮೂರು ಜಾತಿಯ ಹತ್ತಿಯನ್ನು ಈ ಜಿಲ್ಲೆಯಲ್ಲಿ ಬಿತ್ತುವರು. ಆದರೆ ಜವಾರೀ ಹತ್ತಿಯೇ ಮುಖ್ಯ. ಬೆಳಗಾವೀ ಜಿಲ್ಲೆಯಲ್ಲಿ ಯೆಲ್ಲ ಕಡೆಯಲ್ಲಿ ಹತ್ತಿ ಬೆಳೆಯುತ್ತದೆ. ಆದರೆ ಪರಸಗಡ, ಅಥಣಿ, ಈ ತಾಲೂಕುಗಳು ಹತ್ತಿಗೆ ಹೆಸರಾಗಿರುತ್ತವೆ; ಖಾನಾಪುರದಲ್ಲಿ ಯೆಲ್ಲಕ್ಕೂ ಕಡಿಮೆ. ಧಾರವಾಡ ಜಿಲ್ಲೆಯಲ್ಲಿ ಮಲ್ಲಾಡದ ಪ್ರದೇಶ ಹೊರ್ತಾಗಿ ಉಳಿದ ಕಡೆಯಲ್ಲೆಲ್ಲ ಕರೆ ಭೂಮಿಯಲ್ಲಿ ಹತ್ತಿಯು ಬಹು ಸರಸಾಗಿ ಬೆಳೆಯುವದು. ಮುಂಬಯಿ ಇಲಾಖೆಯಲ್ಲಿ ಈ ಜಿಲ್ಲೆಯು ಹತ್ತಿಯ ಬಗ್ಗೆ ಹೆಸರಾಗಿರುತ್ತದೆ. ಈ ಜಿಲ್ಲೆಯಲ್ಲಿ ಜೋಳಕ್ಕೆ ಕೊಡುವಷ್ಟೇ ಭೂಮಿಯನ್ನು ಹತ್ತಿಗೆ ಕೊಡುತ್ತಾರೆಂತಲೂ, ಇಷ್ಟು ಭೂಮಿಯನ್ನು ಹತ್ತಿಗೆ ಬೇರೆ ಯಾವ ಜಿಲ್ಲೆಯಲ್ಲಿಯೂ ಕೊಡುವದಿಲ್ಲೆಂತಲೂ ಹಿಂದೆ ಕೊಟ್ಟ ಕೋಷ್ಟಕದಿಂದ ತಿಳಿಯುವದು. ವಿಜಾಪುರ ಜಿಲ್ಲೆಯಲ್ಲಿ ಬೆಳೆಯುವ ಮೂರೂ ಜಾತಿಯ ಹತ್ತಿಯು ಈ ಜಿಲ್ಲೆಯಲ್ಲಿ ಬೆಳೆಯುತ್ತದೆ. ಆದರೆ ಕರೆಹತ್ತಿ ಬಹು ಸ್ವಲ್ಪ; ಜವಾರೀ ಹತ್ತಿ ಮುಖ್ಯ; ಆದರೂ ವಿಲಾಯತೀ ಹತ್ತಿ ಈ ಜಿಲ್ಲೆಯಲ್ಲಿ ಬೆಳೆದಷ್ಟು ವಿಜಾಪುರ ಬೆಳಗಾವೀ ಜಿಲ್ಲೆಗಳಲ್ಲಿ ಬೆಳೆಯುವದಿಲ್ಲ. ಕಾನಡಾ ಜಿಲ್ಲೆಯಲ್ಲಿ ಹತ್ತಿಯ ಬೆಳೆ ಬರುವದಿಲ್ಲ.

**ಕಬ್ಬು.** ಕಬ್ಬು ವಿಜಾಪುರ ಜಿಲ್ಲೆಯಲ್ಲಿ ತೋಟಗಳಲ್ಲಿ ಮಾತ್ರ ಬೆಳೆಯುತ್ತದೆ. ಬೆಳಗಾವೀ ಜಿಲ್ಲೆಯಲ್ಲಿ ಚಿಕ್ಕೋಡಿ, ಬೆಳಗಾವಿ, ಸಂಪಗಾವಿ, ಖಾನಾಪುರ, ಈ ತಾಲೂಕುಗಳಲ್ಲಿ ಕಬ್ಬಿನ ಪೈರು ವೊಳಿತಾಗಿ ಬರುತ್ತದೆ. ಬತ್ತದ ಭೂಮಿಯಲ್ಲಿ ಯೆರಡು ವರ್ಷ ಬತ್ತ ಬಿತ್ತಿದ ಬಳಿಕ ನಡುವೆ ವೊಂದು ವರ್ಷ ಕಬ್ಬು ಹಚ್ಚುವರು. ಬಿಳಿ ಕಬ್ಬು, ಕರೆ ಕಬ್ಬು, ಹಾಲುಗಬ್ಬು ಅಥವಾ ಹುಲ್ಲುಕಬ್ಬು, ಈ

ಮೂರು ಜಾತಿಗಳ ಕಬ್ಬು ಈ ಜಿಲ್ಲೆಯಲ್ಲಿ ಬೆಳೆಯುತ್ತದೆ. ಮೊದಲಿನ ಯೆರಡು ಜಾತಿಯ ಕಬ್ಬಿನ ರಸದಿಂದ ಬೆಲ್ಲ ಮಾಡುವರು. ಪುಲ್ಲುಕಬ್ಬು ಬಹಳ ಶೀ, ಮಿದು, ಇರುವ ಕಾರಣ ಅದನ್ನು ಮುಖ್ಯವಾಗಿ ತಿನ್ನುವರು. ಧಾರವಾಡ ಜಿಲ್ಲೆಯಲ್ಲಿ ಬೆಳಗಾವಿಯಂತೆ ಮಲ್ಲಾಡದ ಶೀಮೆಯಲ್ಲಿ ಬತ್ತದ ಭೂಮಿಯಲ್ಲಿ ಕಬ್ಬು ಹಚ್ಚುವರು; ಉಳಿದ ಕಡೆಯಲ್ಲಿ ತೋಟಗಳಲ್ಲಿ ಹಚ್ಚುವರು. ಈ ಜಿಲ್ಲೆಯಲ್ಲಿ ವೊಟ್ಟಿಗೆ ಯೆಂಟು ಜಾತಿಯ ಕಬ್ಬು ಬೆಳೆಯುತ್ತದೆ. ಅವುಗಳಲ್ಲಿ ಹಾಲಗಬ್ಬು, ರಾಮ ರಸದಾಳಿ, ಗಬ್ಬ ರಸದಾಳಿ, ಕರೆಕಬ್ಬು, ಇವು ನಾಲ್ಕು ಮುಖ್ಯ; ಮಾರಿಶದ ಕಬ್ಬು, ದೊಡ್ಡ ಕಬ್ಬು, ಬ್ಯಾತಾಳ, ಬಿಳಿ ಕಬ್ಬು, ಇವು ನಾಲ್ಕು ಕಡಿಮೇ ಜಾತಿಗಳು. ಹಾಲಗಬ್ಬಿಗೆ ಶ್ರಮ ಕಡಿಮೆ, ನೀರು ಬಹಳ ಬೇಡ; ಇದರ ಬೆಲ್ಲವು ಬಿಳುವಾಗಿಯೂ ಕಣರೂಪವಾಗಿಯೂ ಮೇಲಾದದ್ದಾಗುವದು. ರಾಮ ರಸದಾಳಿಯನ್ನು ತೋಟಗಳಲ್ಲಿಯೂ ಬತ್ತದ ಭೂಮಿಯಲ್ಲಿಯೂ ಹಚ್ಚುವರು; ಗಬ್ಬ ರಸದಾಳಿಯನ್ನು ತೋಟಗಳಲ್ಲಿ ಮಾತ್ರ ಹಚ್ಚುವರು. ಕಾನಡಾ ಜಿಲ್ಲೆಯಲ್ಲಿ ರಸದಾಳಿ, ಕರೆಕಬ್ಬು, ಬಿಳಿ ಕಬ್ಬು, ಈ ಮೂರು ಜಾತಿಗಳು ಬೆಳೆಯುತ್ತವೆ. ಕರೆ ಕಬ್ಬಿನ ಬೆಲ್ಲ ಮೇಲಾದದ್ದು, ಇದನ್ನು ಸಮುದ್ರತೀರದ ಪ್ರದೇಶಗಳಲ್ಲಿ ಹಚ್ಚುವರು; ಹೊಳೆಗಳ ದಂಡೆಗಳಲ್ಲಿಯೂ, ನೀರಿನ ಜವಳು ಆಡುವ ಸ್ಥಳಗಳಲ್ಲಿಯೂ ಮೂರೂ ಜಾತಿಗಳ ಕಬ್ಬು ವೊಳಿತಾಗಿ ಬೆಳೆಯುತ್ತದೆ.

ವಿಜಾಪುರ ಬೆಳಗಾವೀ ಜಿಲ್ಲೆಗಳ ತೋಟಗಳಲ್ಲಿ ಕಬ್ಬು, ಬಾಳೆ, ಯೆಲೆಬಳ್ಳಿ, ಗೋವಿಂಜೋಳ, ಮೆಣಶಿನ ಕಾಯಿ, ಯಾವತ್ತು ಪ್ರಕಾರದ ಪಲ್ಲೆಗಳು ಬೆಳೆಯುತ್ತವೆ. ಬೈಲು ಶೀಮೆಯಲ್ಲಿ ನೆಲದೊಳಗೆ ನೀರು ವಿಪುಲವಾಗಿ ದೊರಿಯುವಂಥ ಪ್ರದೇಶಗಳಲ್ಲಿ ವಿಶೇಷವಾಗಿ ನದೀತೀರದ ಗ್ರಾಮುಗಳಲ್ಲಿ, ಸಣ್ಣ ದೊಡ್ಡ ತೋಟಗಳಿರುತ್ತವೆ. ಅವುಗಳ ಆದಾಯವು ಹೊಲಗಳ ಆದಾಯಕ್ಕಿಂತ ವಾಡಿಕೆಯಾಗಿ ಹೆಚ್ಚು ಇರುತ್ತದೆ.

**ತೋಟಗಳು.**

ಆದರೆ ಕಾನಡಾ ಜಿಲ್ಲೆಯ ತೋಟಗಳು ಮುಂಬಯಿ ಇಲಾಖೆಯಲ್ಲಿ ಹೆಸರಾಗಿರುತ್ತವೆ. ಈ ತೋಟಗಳಲ್ಲಿ ತೆಂಗು, ಅಡಿಕೆ, ಮೆಣಸು, ಯಾಲಕ್ಕಿ, ಬಾಳೆ, ಮುಂತಾದ ಬೆಲೆಯುಳ್ಳ ಪೈರುಗಳು ವಿಪುಲವಾಗಿ ಬೆಳೆಯುತ್ತವೆ. ಧಾರವಾಡ ಜಿಲ್ಲೆಯಲ್ಲಿಯೂ ಈ ಜಾತಿಯ ಹಲಕೆಲವೂ ಪೈರುಗಳು ತಕ್ಕಮಟ್ಟಿಗೆ ಬರುತ್ತವೆ. ಆದ್ದರಿಂದ ಈ ಯೆರಡು ಜಿಲ್ಲೆಗಳ ತೋಟಗಳಲ್ಲಿಯ ಮುಖ್ಯ ಮುಖ್ಯ ಪೈರುಗಳನ್ನು ಕೆಳಗೆ ವಿವರಿಸಿದ್ದೇವೆ. ಧಾರವಾಡ ಜಿಲ್ಲೆಯಲ್ಲಿ, ಬಂಕಾಪುರ, ಹಾನಗಲ್ಲು, ಕರ್ಜಗಿ, ಕೋಡ, ರಾಣೇಬಿನ್ನೂರು, ಈ ತಾಲೂಕುಗಳಲ್ಲಿ ಬೆಲೆಯುಳ್ಳ ಪೈರು ಕೊಡುವಂಥ ತೋಟಗಳಿರುತ್ತವೆ.

ಕಾನಡಾ ಜಿಲ್ಲೆಯಲ್ಲಿಯ ಸಮುದ್ರತೀರದಲ್ಲಿ ಯೆತ್ತ ನೋಡಿದತ್ತ ತೆಂಗಿನ ಬನಗಳೇ ಇರುತ್ತವೆ. ಅಗಿ ಹಚ್ಚಿದ ಮೂರು ನಾಲ್ಕು ವರ್ಷದ ವರೆಗೆ ಮಾತ್ರ ವ್ಯಾಳ್ಯ ವ್ಯಾಳ್ಯಕ್ಕೆ ನೀರು ಹಾಕಿ ಅಲ್ಪ ಸ್ವಲ್ಪ ಶ್ರಮ ಮಾಡ ಬೇಕಾಗುತ್ತದೆ. ಮರವು ವೊಮ್ಮೆ ಬಲಿತ ಬಳಿಕ ಅದರ ಸಲುವಾಗಿ ಶ್ರಮ ಮಾಡುವ

**ತೆಂಗು.**

ಪ್ರಯೋಜನವಿಲ್ಲ. ಉಪ್ಪಿನ ಭೂಮಿಯಲ್ಲಿ ತೆಂಗಿನ ಮರವು ಪೊಳಿತಾಗಿ ಫಲಿಸುತ್ತದೆ. ಉಪ್ಪು ಇಲ್ಲದ ಭೂಮಿಯಲ್ಲಿ ಅಗಿ ಹಚ್ಚುವಾಗ ಅದರ ಬೊಡ್ಡಿಗೆ ಉಪ್ಪು ಹಾಕುವರು. ಮುಂದೆ ಮರ ಬಲಿಯುವ ವರೆಗೆ ವರ್ಷ ವರ್ಷಕ್ಕೆ ಉಪ್ಪು ಹಾಕಿದರೆ ಮರವು ಬೇಗ ಫಲಿಸುತ್ತದೆ. ಅಗಿ ಹಚ್ಚಿ ಹತ್ತು ವರ್ಷದ ನಂತರ ಕಾಯಿಗಳಾಗುತ್ತವೆ. ಸಮುದ್ರ ತೀರದಲ್ಲಿ ಹತ್ತು ವರ್ಷದೊಳಗೂ ಕಾಯಾಗ ಬಹುದು. ಧಾರವಾಡ ಜಿಲ್ಲೆಯಲ್ಲಿ ಹನ್ನೆರ ಡನೇ ವರ್ಷ ಕಾಯಾಗಲಿಕ್ಕೆ ಆರಂಭವಾಗುತ್ತದೆ. ಮರವು ಪೊಳಿತಾಗಿ ಬಲಿತ ಬಳಿಕ ಮೂರು ತಿಂಗಳಿಗೊಮ್ಮೆ ಕಾಯಿ ತೆಗಿಯುವರು. ತೆಂಗಿನ ಮರವು ನೂರು ವರ್ಷ ಬಾಳು ತ್ತದೆಂದು ಹೇಳುತ್ತಾರೆ. ಯೆಷ್ಟು ಬಡತನದ ಬೆಳೆ ಬಂದರೂ ವರ್ಷಕ್ಕೆ ದರ ಪೊಂದಕ್ಕೆ ೫ ರೂಪಾಯಿಗಿಂತ ಕಡಿಮೆ ಆದಾಯವಾಗುವದಿಲ್ಲ. ಭರದಿಂದ ಬೆಳಿದ ಮರದ ಆದಾ ಯವು ವರ್ಷಕ್ಕೆ ೬೦ರಿಂದ ೬೫ ರೂಪಾಯಿಯ ವರೆಗೆ ಆಗುತ್ತದೆ.

**ಅಡಿಕೆ.**

ಅಡಿಕೆಯ ಮರವು ಕಾನಡಾ ಜಿಲ್ಲೆಯಲ್ಲಿ ಘಟ್ಟದ ಕೆಳಗೂ ಮೇಲೆಯೂ ಧಾರವಾಡ ಜಿಲ್ಲೆಯ ಮೇಲೆ ಹೇಳಿದ ತಾಲೂಕುಗಳಲ್ಲಿಯೂ ಬೆಳಿಯುತ್ತದೆ. ಆದರೆ ಶಿರಸಿ, ಶಿದ್ದಾಪು ರ ತಾಲೂಕುಗಳಲ್ಲಿಯೂ, ಘಟ್ಟದ ಕೆಳಗೆ ಸಹ್ಯಾದ್ರಿಯ ಬುಡ ದಲ್ಲಿಯೂ ಅಡಿಕೇ ಮರದ ಬೆಳೆ ಬಂದ ಹಾಗೆ ಯೆಲ್ಲಿಯೂ ಬರು ವದಿಲ್ಲ. ಮೊದಲು ನೆಲ ಪೊಳ್ಳು ಮಾಡಿ ಆಸಿಕೇ ಅಡಿಕೆಗಳನ್ನು ತುಂಬು ಮೇಲೆ ಮಾಡಿ ಹುಗಿದು, ಮೇಲೆ ಬಾಳೇ ಯೆಲೆಯ ಹಂದರದ ನೆರಳು ಮಾಡಿ, ಪ್ರತಿ ದಿವಸ ನೀರು ಹಾ ಕುತ್ತ ಹೋಗುವರು. ಫೆಬ್ರುವಾರಿಯಲ್ಲಿ ಈ ಬೀಜಗಳನ್ನು ಹಾಕಿದರೆ ಮೊಳಿಕೆಗಳು ಮೇ ತಿಂಗಳಲ್ಲಿ ನೆಲದ ಮೇಲೆ ಕಾಣಿಸುವವು. ಒಂದು ವರ್ಷದೊಳಗೆ ಈ ಮೊಳಿಕೆಗಳು ಆರು ಇಂಚಿಗಿಂತ ಹೆಚ್ಚು ಬೆಳಿಯುವದಿಲ್ಲ. ಮೂರು ವರ್ಷವಾದ ಬಳಿಕ ಅಗಿಗಳು ಸುಮಾರು ಮೂರು ನಾಲ್ಕು ಫೂಟು ಯೆತ್ತರಾಗಲಾಗಿ, ಅವುಗಳನ್ನು ಹಚ್ಚ ತಕ್ಕ ಸ್ಥಳದಲ್ಲಿ ಬಾಳೇ ಗಿಡದ ನೆರಳಿನಲ್ಲಿ ಹಚ್ಚುವರು. ಅಗಿ ಹಚ್ಚಿದ ಬಳಿಕ ಹತ್ತು ವರ್ಷದ ನಂತರ ಅಡಿಕೆಯ ಮರಕ್ಕೆ ಕಾಯಿಗಳಾಗುತ್ತವೆ; ಮುಂದೆ ಐದು ವರ್ಷದ ನಂತರ ಭರಪೂರ ಫಲ ಬರುತ್ತದೆ. ಈ ಮರಗಳು ೫೦ರಿಂದ ೧೦೦ ವರ್ಷದ ವರೆಗೆ ಬಾಳುತ್ತವೆ. ಪೊಳಿ ತಾಗಿ ಬೆಳಿದ ಮರಕ್ಕೆ ವರ್ಷಕ್ಕೆ ಸುಮಾರು ೯ ಶೇರು ಅಡಿಕೆಗಳು ಹೊರಡುತ್ತವೆ; ನಿಕೃಷ್ಟ ಸ್ಥಿತಿಯ ಮರಕ್ಕೆ ಇದರ ಅರ್ಧದಷ್ಟು ಅಡಿಕೆಗಳು ಬರುವವು. ಅಡಿಕೇ ಕಾಯಿ ಹಣ್ಣಾಗುವ ವರೆಗೆ ಬಿಟ್ಟರೆ ಅದರೊಳಗೆ ಮೇಲಾದ ಬರಡೀ ಅಡಿಕೆ ಹೊರಡುತ್ತದೆ; ಯೆಳ ಕಿನ ಕಾಯಿಯಲ್ಲಿ ಚಿಕಣೀ ಅಡಿಕೆ ಹೊರಡುತ್ತದೆ. ಹಸಿ ಅಡಿಕೆಗಳನ್ನು ಕತ್ತರಿಸಿ ಕುದಿಸಿ ಬಗೆ ಬಗೆಯ ಲವಂಗ ಚೂರು ಅಡಿಕೆಗಳನ್ನು ಮಾಡುವರು. ಒಂದು ಯೆಕರಿನಲ್ಲಿ ೫೦೦ ಅಡಿಕೇ ಮರಗಳು ಚನ್ನಾಗಿ ಬೆಳಿಯುತ್ತವೆ.

ಸಹ್ಯಾದ್ರಿಯ ನೆತ್ತಿಯ ಮೇಲೆ, ಅಂದರೆ ಶಿರಸಿ ಸಿದ್ದಾಪುರ ತಾಲೂಕುಗಳಲ್ಲಿ ಯಾಲ ಕ್ಕಿಯ ಬಳ್ಳಿಗಳು ಬಹು ಸರಸಾಗಿ ಬೆಳಿಯುತ್ತವೆ. ಅಗಟಂಬರ ತಿಂಗಳಲ್ಲಿ ಹೊಸ ಯಾಲ ಕ್ಕಿಯ ಕಾಳುಗಳನ್ನು ದಟ್ಟಾಗಿ ಬಿತ್ತಿ, ಬಿಸಿಲು ಹತ್ತದಂತೆ ಮೇಲೆ ನೆರಳು ಮಾಡುವರು.

ಮೂರು ತಿಂಗಳಿಗೆ ಮೊಳಿಕೆ ಹುಟ್ಟುವದು. ಅಗಿಗಳು ವೊಂದು ಫೂಟಿನಷ್ಟು ಯೆತ್ತರವಾದ ಬಳಿಕ ಅವುಗಳನ್ನು ಕಿತ್ತಿ, ಬೇರೆ ಕಡೆಯಲ್ಲಿ ಅಂಗಲಾಗಿ ಹಚ್ಚುವರು. ಮುಂದೆ ವೊಂದುವರೆ ವರ್ಷದ ನಂತರ ಅಡಿಕೆಯ ಬನದಲ್ಲಿ ನೆರಳು ನೋಡಿ ಮತ್ತೊಮ್ಮೆ ಅವುಗಳನ್ನು ಕಿತ್ತಿ ಹಚ್ಚುವರು. ಮೊದಲಿಗೆ ಕಿತ್ತಿ ಹಚ್ಚಿದಂದಿನಿಂದ ಸುಮಾರು ಮೂರು ವರ್ಷಗಳಲ್ಲಿ ಬಳ್ಳಿಗಳಿಗೆ ಕಾಯಿಗಳಾಗುತ್ತವೆ. ಅವು ಪೂರಾ ಬಲಿತ ಬಳಿಕ ಅವನ್ನು ಕೊಯ್ದು ಬಿಸಿಲಿನೊಳಗೆ ಚಾಪೆಯ ಮೇಲೆ ಹರವಿ ನಾಲ್ಕು ದಿವಸ ವೊಣಗಿಸುವರು. ಕಾಯಿ ಕೊಯ್ದ ಬಳಿಕ ಬಳ್ಳಿಗೆ ಮತ್ತೆ ಫಲವಾಗುವದಿಲ್ಲ. ಅದನ್ನು ಕೊಯ್ದು ಬೇರೆ ಕಡೆಯಲ್ಲಿ ಹಚ್ಚುವರು. ಅಂದರೆ ಮುಂದೆ ವೊಂದು ವರ್ಷದ ನಂತರ ಆ ಹಚ್ಚಿದ ಬಳ್ಳಿಗಳಿಗೆ ಮತ್ತೆ ಕಾಯಿಗಳಾಗುವವು. ಮೊದಲಿನ ಬಳ್ಳಿಗಳನ್ನು ಕೊಯ್ದ ಬಳಿಕ ಅವು ವೊಣಗಿ ಹೊಸ ಮುಗಳು ಬಿಡುತ್ತವೆ. ಅವಕ್ಕೆ ಮುಂದೆ ಯೋಗ್ಯ ಕಾಲಕ್ಕೆ ಕಾಯಿಗಳಾಗುವವು. ಮೇಲಾದ ಭೂಮಿಯಲ್ಲಿ ಯೆಕರಿಗೆ ವೊಂದು ಮಣದಂತೆ (೫೬ ಶೇರಿನಂತೆ) ಯಾಲಕ್ಕಿಗಳಾಗುತ್ತವೆ; ಕಡಿಮೇ ತರದ ಭೂಮಿಯಲ್ಲಿ ಸುಮಾರು ವೊಂದು ಧಡೆ ಯಾಲಕ್ಕಿ ಬರುವವು.

**ಯಾ ಲ ಕ್ಕಿ.**

ಮೆಣಸಿನಲ್ಲಿ ಮೂರು ಜಾತಿಗಳುಂಟು; ಕರಿಮಳಿ ಸಾರು, ಸಾಂಬಾರ, ಅರಿಶಿಣ ಮೂರ್ತಿಗ. ಮೊದಲನೇ ಜಾತಿಯು ಕಾಗದಳೀ ಭೂಮಿಯಲ್ಲಿ ಬೆಳಿಯುತ್ತದೆ; ೨ನೇ ೩ನೇ ಜಾತಿಗಳು ಅರಿಶಿಣದಂಥ ಭೂಮಿಯಲ್ಲಿ ಬೆಳಿಯುತ್ತವೆ. ಮೊದಲನೇ ಜಾತಿಯ ಬಳ್ಳಿಗೆ ವರ್ಷಕ್ಕೆ ಸುಮಾರು ೫ ಶೇರು ಮೆಣಸು ಹುಟ್ಟುತ್ತದೆ; ಯೆರಡನೇದಕ್ಕೆ ೧ ಶೇರು, ೩ನೇದಕ್ಕೆ ೨ ಶೇರು. ಮೆಣಸಿನ ಬಳ್ಳಿಯ ಟೊಂಗೆಗಳನ್ನು ಅಡಿಕೆಯ ಮರದ ಬುಡದಲ್ಲಿ, ವೊಂದು ಮರಕ್ಕೆ ನಾಲ್ಕರಂತೆ ಊರುವರು. ಊರಿದ ಟೊಂಗೆಗಳು ಸುಮಾರು ಯೆರಡು ಫೂಟುದ್ದ ಇರುತ್ತವೆ. ಅವುಗಳ ಮೇಲಿನ ತುದಿಗಳನ್ನು ಅಡಿಕೇ ಮರಕ್ಕೆ ಕಟ್ಟಿ ಬಿಟ್ಟರೆ ತೀರಿತು; ಹೆಚ್ಚಿಗೇನು ಶ್ರಮ ಮಾಡುವ ಪ್ರಯೋಜನವಿಲ್ಲ; ಮುಂದೆ ವರ್ಷಕ್ಕೊಮ್ಮೆ ಬಳ್ಳಿಯು ಮರದ ಮೇಲೆ ಯೆರಿದ ಹಾಗೆ ಕಟ್ಟುತ್ತ ಮಾತ್ರ ಹೋಗಲಿಕ್ಕೆ ಬೇಕು. ಬಳ್ಳಿಯನ್ನು ಹಚ್ಚಿ ಆರು ವರ್ಷದ ನಂತರ ಕಾಯಾಗುವದು. ಮುಂದೆ ಸುಮಾರು ೨೦ ವರ್ಷದ ವರೆಗೆ ಬಳ್ಳಿಗಳು ವರ್ಷ ವರ್ಷಕ್ಕೆ ಕಾಯಾಗುತ್ತ ಹೋಗಿ, ಆ ಮೇಲೆ ವೊಣಗುವವು. ಮೆಣಸು ಪೂರಾ ತುಂಬಿದ ಬಳಿಕ ಹಣ್ಣಾಗುವ ಪೂರ್ವದಲ್ಲಿ ಕೊಯ್ದು, ಮೂರು ದಿನ ಮನೆಯೊಳಗೆ ರಾಶಿ ಹಾಕಿ ಇಟ್ಟು, ಆ ಮೇಲೆ ಕಾಲಿನಿಂದ ತಿಕ್ಕಿ ಕಾಳುಗಳನ್ನು ಬೇರೆ ಮಾಡಿ ವೊಣಗಿಸುವರು. ಉತ್ತಮ ಭೂಮಿಯಲ್ಲಿ ಯೆಕರಿಗೆ ೧೦ ಮಣದಂತೆ ಮೆಣಸು ಬೆಳಿಯುತ್ತದೆ; ಕನಿಷ್ಠ ಭೂಮಿಯಲ್ಲಿ ೨ ಮಣ ಮಾತ್ರ ಬೆಳಿಯುವದು.

**ಮೆ ಣ ಸು.**

ಸ್ವಲ್ಪ ಮೆಣಸಿನ ಕಾಯಿಗಳನ್ನು ಹಣ್ಣಾಗುವ ವರೆಗೆ ಬಳ್ಳಿಯಲ್ಲಿ ಬಿಟ್ಟು, ಆ ಮೇಲೆ ಕೊಯ್ದು ನಾಲ್ಕಾರು ದಿನ ಬಿಸಿಲೊಳಗೆ ವೊಣಗಿಸುವರು. ಪೂರಾ ವೊಣಗಿದ ಬಳಿಕ ಅದನ್ನು ತಣ್ಣೀರೊಳಗೆ ಸ್ವಲ್ಪ ನೆನಿಸಿ, ಕೈಯಿಂದ ತಿಕ್ಕಿ ಮೇಲಿನ ತ್ರೋಟೆಯನ್ನು ಸುಲಿ

ಯುವರು. ಬಳಿಕ ಬಿಸಿಲೊಳಗೆ ವೊಣಗಿಸಲಾಗಿ ಬಿಳಿ ಮೆಣಸು ಆಗುತ್ತದೆ. ಬಿಳಿ ಮೆಣಸು ಔಷಧಕ್ಕೆ ಬರುತ್ತದೆ.

ಕಾನಡಾ ಜಿಲ್ಲೆಯ ಅಡವಿಯಲ್ಲಿ ಮೆಣಸಿನ ಬಳ್ಳಿಗಳು ತಮಗೆ ತಾವೇ ಹುಟ್ಟಿ, ಮರಗಳ ಮೇಲೆ ಯೇರಿ ಫಲ ಕೊಡುವವು. ಒಕ್ಕಲಿಗನು ಬಳ್ಳಿ ಯೇರಿದ ಮರದ ಅಡ್ಡತಿಡ್ಡ ಟೊಂಗೆಗಳನ್ನು ಕಡಿದು, ಬೇರೆ ಜಾತಿಯ ಬಳ್ಳಿಗಳು ಯೇರಿದ್ದರೆ ಅವನ್ನು ತೆಗಿದು ಚಲ್ಲಿ, ಮೆಣಸಿನ ಬಳ್ಳಿಯನ್ನು ವರ್ಷ ವರ್ಷಕ್ಕೆ ಕಟ್ಟುತ್ತ ಹೋದರೆ ತೀರಿತು. ಅಡಿವೇ ಮೆಣಸು ತೋಟದ ಮೆಣಸಿನಷ್ಟು ಮೇಲಾದದ್ದಿರುವದಿಲ್ಲ; ಅದರ ಫಲವೂ ತೋಟದಲ್ಲಿ ಬರುವ ಫಲದ ಅರ್ಧದಷ್ಟಿರುತ್ತದೆ.

**ಎಲೆ ಬಳ್ಳಿ.**

ಎಲೆ ಬಳ್ಳಿಗಳನ್ನು ಮಾವಿನ ತೋಟಗಳಲ್ಲಿಯೂ ಅಡಿಕೆಯ ತೋಟಗಳಲ್ಲಿಯೂ ಹಚ್ಚುವರು. ಬಳ್ಳಿಗಳು ಮೂರು ವರ್ಷ ವೊಳಿತಾಗಿ ಬೆಳೆದ ಬಳಿಕ ಹದಿನೈದು ದಿವಸ ಕ್ಕೊಮ್ಮೆ ಯೆಲೆಗಳನ್ನು ಕೊಯ್ಯುವರು; ಒಂದು ಬಳ್ಳಿಗೆ ಸುಮಾರು ೧೦೦ರಿಂದ ೨೦೦ ವರೆಗೆ ಯೆಲೆಗಳು ಹೊರಡುವವು. ಒಂದು ಯೆಕರಿನಲ್ಲಿ ೫೦೦ ಅಡಿಕೇ ಮರಗಳಿದ್ದರೆ, ೪೦೦೦೦ ವಿಳ್ಳೇದೆಲೆಗಳು ಬರುತ್ತವೆ. ಕರೆ ಯೆಲೆಯ ಬಳ್ಳಿಗಳನ್ನೇ ತೋಟಗಳಲ್ಲಿ ಹಚ್ಚುವರು. ಕಾನಡಾ ಜಿಲ್ಲೆಯಲ್ಲಿ ಪೇಟೇ ಯೆಲೆಯ ಬಳ್ಳಿಗಳು ಅಡವಿಯಲ್ಲಿ ತಮಗೆ ತಾವೇ ಬೆಳೆದು ಕೊಳಿತು ಕೆಡುತ್ತಿರುತ್ತವೆ; ಅವನ್ನು ಯಾರೂ ಕೇಳುವದಿಲ್ಲ.

**ಬಾಳೆ.**

ಬಾಳೆಯ ಗಿಡಗಳು ಕಾನಡಾ ಜಿಲ್ಲೆಯಲ್ಲಿ ಯೆಲ್ಲ ಕಡೆಯಲ್ಲಿ ಬೆಳೆಯುತ್ತವೆ; ಸಮುದ್ರತೀರದ ಬಾಳೇ ಹಣ್ಣಿನ ರುಚಿ ಹೆಚ್ಚು. ಬಾಳೆಯಲ್ಲಿ ಹತ್ತಿಪ್ಪತ್ತು ಜಾತಿಗಳಿರುತ್ತವೆ. ಸಮುದ್ರತೀರದ ಗುಜರಾಥೀ ಬಾಳೇ ಹಣ್ಣಿನಂಥ ಜಾತಿಯು ಬೆಳೆಯುವದು ಬಹಳ; ಆದರೆ ಸೋನಕೇಳಿ ಯೆಂಬ ಜಾತಿಯು ಯೆಲ್ಲಕ್ಕೂ ಹೆಚ್ಚು ರುಚಿಯುಳ್ಳದ್ದು. ಬಾಳೇ ಅಗಿಗಳನ್ನು ಹಚ್ಚಿದ ಬಳಿಕ ಮೂರನೇ ವರ್ಷ ಫಲಿಸುತ್ತವೆ. ಮುಂದೆ ಮೂರು ವರ್ಷ ಕಾಯಾಗಿ ವೊಣಗುವವು. ಬಾಳೆಯ ಬೂದಿಯು ಬಣ್ಣದ (ನೀಲಿಗೆ ವಿಶೇಷವಾಗಿ) ಕೆಲಸಕ್ಕೆ ಬರುತ್ತದೆ.

ಕಾನಡಾ ಜಿಲ್ಲೆಯ ತೋಟಗಳಲ್ಲಿ ಮೇಲೆ ಹೇಳಿದ ಪೈರುಗಳಲ್ಲದೆ ಮಾವು, ಹಲಸು, ಕಿತ್ತಳೆ, ಕಂಚಿ, ಲಿಂಬಿ, ದಾಳಿಂಬ, ಅಂಜೀರ, ಶೀತಾಫಲ, ರಾಮಫಲ, ಪಪಾಯಿ, ಅಮಸೋಲು, ಬದಾಮು, ಆಕ್ರೋಡು, ಮುಂತಾದ ಫಲಗಳೂ, ಶುಂಠಿ, ಅರಿಶಿಣ, ಮೆಣಶಿನ ಕಾಯಿ ಮುಂತಾದ ಮಸಾಲೆಯ ಜೀನಸುಗಳೂ ಹೇರಳವಾಗಿ ಬೆಳೆಯುತ್ತವೆ. ಬತ್ತದ ಭೂಮಿಯಲ್ಲಿ ರಾಗಿ, ಸಾವಿ, ಕೆಂಜೋಳ, ಯೆಳ್ಳು, ಗೆಣಸು, ಗಾಂಜಿ, ಔಡ್ಲ, ಉದ್ದು, ಹೆಸರು, ಹುರಳಿ, ಕಡ್ಲೆ, ಅಲಸಂದಿ, ಬಟ್ಟುಗಡ್ಲೆ, ಮುಂತಾದ ಧಾನ್ಯಗಳು ಬೆಳೆಯುತ್ತವೆ. ಇವಲ್ಲದೆ ಯೆರಡನೇ ಭಾಗದಲ್ಲಿ ಹೇಳಿದ ಅಡವಿಯ ಹುಟ್ಟುವಳಿ ಬೇರೆ.

ಕಾನಡಾ ಜಿಲ್ಲೆಯಲ್ಲಿ ಪೂರಾ ಬರವು ಯೆಂದೂ ಬೀಳುವದಿಲ್ಲೆಂದು ತೋರುತ್ತದೆ. ಸನ್ ೧೮೭೫—೬ ಈ ವರ್ಷದಲ್ಲಿ ಕೆಲವು ಭಾಗಗಳಲ್ಲಿ ಮಳೆ ಕಡಿಮೆಯಾದದ್ದರಿಂದಲೂ

ಬೈಲು ಶೀಮೆಯ ಜನರೂ ದನಗಳೂ ಈ ಜಿಲ್ಲೆಯಲ್ಲಿ ಬಂದು ತುಂಬಿದರಿಂದಲೂ

**ಬರಗಳು.**

ಕೆಲವು ಅಂಶದಿಂದ ಬರದ ಸ್ವರೂಪ ಬಂದಿತ್ತು; ಸುಮಾರು ೩೦೦೦ ಜನ ಸತ್ತರು. ಇದರ ಪೂರ್ವದಲ್ಲಿಯೂ ಈಚೆಯಲ್ಲಿಯೂ ಬೆಳೆ ಬಾರದ್ದರಿಂದ ಬರ ಬಿದ್ದದ್ದರ ದಾಖಲೆಯು ದೊರಿಯುವದಿಲ್ಲ. ಆದರೆ ಬೇರೆ ಕಡೆಯಲ್ಲಿ ಬರ ಬಿದ್ದಾಗ ಗುಳೆಯ ಜನರು ಈ ಜಿಲ್ಲೆಗೆ ಬಂದದ್ದರಿಂದ ಬರದಂಥ ಸ್ಥಿತಿಯು ಬಹಳ ಸಾರಿ ವೊದಗಿತು. ಇದರಂತೆ ಧಾರವಾಡ ಜಿಲ್ಲೆಯ ಮಲ್ಲಾಡದ ಭಾಗದಲ್ಲಿಯೂ ಬೆಳೆ ಬಾರದ್ದರಿಂದ ಯೆಂದೂ ಬರ ಬಿದ್ದಂತೆ ಕಾಣುವದಿಲ್ಲ. ಬರಗಾಲದಲ್ಲಿ ಪರದೇಶದ ಜನರು ಬಹಳ ಬಂದದ್ದರಿಂದ ಕಾನಡಾ ಜಿಲ್ಲೆಯಂತೆ ಈ ಮಲ್ಲಾಡದ ಭಾಗದಲ್ಲಿಯೂ ಬಹಳ ಸಾರಿ ಕೆಲವಂಶ ಬರಗಾಲದ ಲಕ್ಷಣವು ತೋರಿತು.

ಆದರೆ ಮುಂಬಯಿ ಕರ್ನಾಟಕದ ಬೇರೆ ಭಾಗಗಳಲ್ಲಿ ಆಗಾಗ್ಗೆ ಬರ ಬೀಳುತ್ತಿರುತ್ತದೆಂದು ಇತಿಹಾಸದಿಂದ ತಿಳಿಯುತ್ತದೆ. ಯೆಲ್ಲಕ್ಕೂ ಪೂರ್ವದ್ದು "ದುರ್ಗಾದೇವಿ" ಯೆಂಬ ಬರವು. ಇದು ಸನ್ ೧೩೯೬ನೇ ವರ್ಷ ಆರಂಭವಾಗಿ ಹನ್ನೆರಡು ವರ್ಷ ಏಕ ಪ್ರಕಾರವಾಗಿ ದಕ್ಷಿಣ ದೇಶದಲ್ಲೆಲ್ಲ ಹಬ್ಬಿತ್ತು. ಈ ಬರದಿಂದ ದಕ್ಷಿಣ ದೇಶವೆಲ್ಲ ಉಧ್ವಸ್ತವಾಯಿತೆಂದು ಲೇಖಗಳಿವೆ. ಇದರ ನಂತರ ಸನ್ ೧೪೨೦-೨೩, ೧೪೭೦-೭೩, ೧೬೨೯-೩೦, ೧೬೮೫, ೧೭೧೭, ೧೭೮೭, ೧೭೯೧, ೧೮೦೩, ೧೮೩೨-೩೩, ೧೮೫೩-೫೪, ೧೮೬೩, ೬೪, ೬೫, ೧೮೭೧, ೧೮೭೬-೭೭, ಈ ವರ್ಷಗಳಲ್ಲಿ ಕಾಳಿನ ದುರ್ಭಿಕ್ಷದಿಂದ ಹೆಚ್ಚಾಗಲಿ ಕಡಿಮೆಯಾಗಲಿ ಭಯಂಕರವಾದ ಕ್ಷಾಮಗಳು ಬಿದ್ದವು. ಸನ್ ೧೭೯೧ನೇ ವರ್ಷದ ಬರಕ್ಕೆ "ಡೋಗೀ ಬರ" ವೆಂಬ ಹೆಸರು ಬಿದ್ದದೆ; ಮನುಷ್ಯರ ತಲೆ ಡೋಗಿಗಳು ದಿಕ್ಕಿಲ್ಲದೆ ಉರುಳಾಡುತ್ತಿದ್ದದರಿಂದ ಅದರ ಸ್ಮರಣೆಯು ಜನರೊಳಗೆ ಇನ್ನೂ ವೊಳಿತಾಗಿ ಇರುತ್ತದೆ. ಸನ್ ೧೮೦೩ನೇ ವರ್ಷ ಮಳೆ ಬೆಳೆಗಳು ವೊಳಿತಾಗಿ ವೊದಗಿದಾಗ್ಯೂ ಪೆಂಢಾರೀ ಜನರ ಪುಂಡತನದಿಂದ ಭೂಮಿಯೊಳಗಿನ ಫೈರೆಲ್ಲ ಹಾಳಾಗಿ ಬರ ಬಿತ್ತು; ಇದಕ್ಕೆ ರಾಗೀ ಬರವೆನ್ನುವರು; ಯಾಕಂದರೆ ಈ ಬರದಲ್ಲಿ ರಾಗಿ ಮಾತ್ರ ಹಲ ಕೆಲವು ಕಡೆಯಲ್ಲಿ ಮನುಷ್ಯರ ಜೀವನಕ್ಕೆ ಆಧಾರವಾಗಿತ್ತು. ಸನ್ ೧೮೩೨-೩೩ನೇ ವರ್ಷದ ಬರವೇ ನಂದನ ನಾಮ ಸಂವತ್ಸರದ ಬರವು. ಅದು ಜನರ ಸ್ಮರಣೆಯಲ್ಲಿ ಇನ್ನೂ ಪೂರಾ ಇರುವ ಕಾರಣ ಅದನ್ನು ಕುರಿತು ಹೆಚ್ಚಿಗೆ ಬರಿಯುವ ಪ್ರಯೋಜನವಿಲ್ಲ. ಸನ್ ೧೮೫೩-೫೪ನೇ ವರ್ಷದ ಬರವು ಹೆಚ್ಚಾಗಿ ದನಗಳಿಗೆ ಇತ್ತು. ಆ ವರ್ಷ ಭೂಮಿಯಲ್ಲಿ ಯೆತ್ತ ನೋಡಿದರೂ ದನಗಳ ಯೆಲುವುಗಳೇ ಕಾಣಿಸುತ್ತಿದ್ದವು. ಸನ್ ೧೮೬೩ರಿಂದ ೬೬ನೇ ವರ್ಷದ ವರೆಗೆ ಅಮೇರಿಕದಲ್ಲಿ ಯುದ್ಧ ನಡಿದ ಮೂಲಕ ಈ ದೇಶದಲ್ಲಿ ಅರಳೆಯ ಬೆಲೆ ಬಹಳ ಯೇರಿದ್ದರಿಂದ ಭೂಮಿಯಲ್ಲಿ ರೈತರು ಕಾಳು ಬಿತ್ತದೆ ಹತ್ತಿಯನ್ನೇ ಬಿತ್ತಿದ ಕಾರಣ ಕೆಲವಂಶದಿಂದ ಬರಗಾಲದ ಲಕ್ಷಣವು ತೋರಿತು. ಆದರೆ ಆ ಕಾಲಕ್ಕೆ ವೊಕ್ಕಲಿಗರ ಬಳಿಯಲ್ಲಿ ದುಡ್ಡು ವೊಳಿತಾಗಿ ಇತ್ತು. ಈ ಬರದಲ್ಲಿ ಕಾನಡಾ ಜಿಲ್ಲೆಯ ಅಡವಿಯಲ್ಲಿ ಬಿದರಕ್ಕಿಯು ಬಹಳ ಬೆಳಿದದ್ದರಿಂದ ಬಡ ಜನರ ಜೀವನಕ್ಕೆ

ವೊಳ್ಳೇ ಸಹಾಯವಾಯಿತು. ಸನ್ ೧೮೭೬-೭೭ನೇ ವರ್ಷದ ಉಗ್ರವಾದ ಬರವು ಯಾವತ್ತು ಜನರ ಸ್ಮರಣೆಯಲ್ಲಿ ವೊನ್ನೆ ವೊನ್ನೆ ಆದಂತೆ ಇರುತ್ತದೆ. ಈ ಬರವು ಸನ್ ೧೮೭೬ನೇ ವರ್ಷದ ನವಂಬರಿನಿಂದ ೧೮೭೭ನೇ ವರ್ಷದ ದಿಜಂಬರಿನ ವರೆಗೆ ಇತ್ತು. ಆಗ ಉತ್ತರ ದೇಶಗಳಲ್ಲಿ ಧಾನ್ಯಗಳು ವಿಪುಲವಾಗಿ ದೊರಿಯುವ ಹಾಗಿದ್ದಾಗ್ಯೂ ಈ ಶೀಮೆಯಲ್ಲಿ ಹೊಗೆಬಂಡಿ ಇಲ್ಲದ್ದರಿಂದ ಕಾಳು ದೊರಿಯುವದು ದುಸ್ತರವಾಯಿತು. ಛಕಡಿಗಳ ಮೇಲೆ ಕಾಳು ಕಳಿಸ ಬೇಕಾದರೆ, ಯೆತ್ತುಗಳಿಗೆ ಮೇವು ದೊರಿಯುತ್ತಿದ್ದಿಲ್ಲ. ಸೊಲ್ಲಾಪುರದಿಂದ ವಿಜಾಪುರಕ್ಕೆ ಕಾಳು ತಕ್ಕೊಂಡು ಹೋಗುವ ಛಕಡಿಗಳಲ್ಲಿ ಅರ್ಧ ಕಾಳುಗಳನ್ನೂ ಅರ್ಧ ಕಣಿಕೆಯನ್ನೂ ಹೇರುವರು. ಈ ಬರದಲ್ಲಿ ಬಡ ಜನರು ಹುಣಚಿಯ ಯೆಲೆ, ವಳವುಚ್ಚಗ, ತೊಡಸಿಯ ಯೆಲೆ, ಹಿಟಗೊನೀ ಹುಲ್ಲು, ಮುಂತಾದ ಕಾಡು ಪದಾರ್ಥಗಳನ್ನು ತಿನ್ನುವರು. ಸರಕಾರದವರು ಲಕ್ಷಾವಧಿ ರೂಪಾಯಿ ವೆಚ್ಚ ಮಾಡಿ, ಹೊಸ ಕೆಲಸಗಳನ್ನು ತೆಗಿದು ಕೆಲಸ ಮಾಡುವಂಥವರನ್ನು ಬದುಕಿಸಿದರು; ಊರೂರಿಗೆ ಅಡಿಗೆಯ ಕಾರಖಾನೆಗಳನ್ನಿಟ್ಟು, ಅಶಕ್ತರನ್ನೂ ಹೆಂಗಸರನ್ನೂ ಹುಡುಗರನ್ನೂ ಬದುಕಿಸಿದರು. ಈ ಬರದಲ್ಲಿ ಸರಕಾರದವರಿಂದ ಪ್ರಜೆಗಳಿಗೆ ಸಹಾಯವಾದಷ್ಟು ಹಿಂದೆ ಯಾವ ಬರದಲ್ಲಿಯೂ ಸ್ವದೇಶದ ಯಾವ ಸರಕಾರದಿಂದಲೂ ಆಗಿರಲಿಕ್ಕಿಲ್ಲೆನ್ನಲಿಕ್ಕೆ ಅಡ್ಡಿ ಇಲ್ಲ. ಆದರೂ ಅಸಂಖ್ಯ ಜನ ಸತ್ತಿತು. ಬ್ರಾಹ್ಮಣರು ಮುಂತಾದ ಉತ್ತಮ ಕುಲದವರು ಸರಕಾರದ ಛತ್ರಗಳಲ್ಲಿ ಹೋಗಿ ಉಣ್ಣಲಿಕ್ಕೂ ಕಾಮುಗಾರಿ ನಡಿದಲ್ಲಿ ಹೋಗಿ ಕೆಲಸ ಮಾಡಲಿಕ್ಕೂ ಮಾನ ಸಾಲದೆ ಮನೆಯಲ್ಲಿ ಬಿದ್ದು ಸತ್ತರು. ಪರದೇಶಗಳಿಗೆ ಗುಳೆ ಕಟ್ಟಿಕೊಂಡು ಹೋದವರಲ್ಲಿ ಬಹು ತರ ಯಾರೂ ತಿರುಗಿ ಬರಲಿಲ್ಲ. ಈ ಬರದಲ್ಲಿ ಮನುಷ್ಯರಂತೆ ದನಗಳಾದರೂ ಬಹಳ ಸತ್ತವು. ಸನ್ ೧೮೭೨ನೇ ವರ್ಷದ ಖಾನೇಸುಮಾರಿಗೂ, ೧೮೮೧ನೇ ವರ್ಷದ ಖಾನೇಸುಮಾರಿಗೂ ಪಡಿತಾಳ ನೋಡಲಾಗಿ, ವಿಜಾಪುರ ಜಿಲ್ಲೆಯಲ್ಲಿ ಸುಮಾರು ೬೩೪೮೪೧ ಜನ ಸತ್ತಿತೆಂತಲೂ ಬೆಳಗಾವೀ ಜಿಲ್ಲೆಯಲ್ಲಿ ೧೪೨೦೦೦ ಜನ ಸತ್ತಿತೆಂತಲೂ ತಿಳಿಯುತ್ತದೆ. ಧಾರವಾಡ ಜಿಲ್ಲೆಯಲ್ಲಿ ಇಷ್ಟು ಜನ ಕ್ಷಯವಾಗಲಿಲ್ಲೆಂಬ ತೋರುತ್ತದೆ.